


ಕನ್ನಡಕ್ಕಾಗಿ ಕೈ ಎತ್ತಿ
ನಿಮ್ಮ ಕೈ ಕಲ್ಪವೃಕ್ಷವಾಗುತ್ತದೆ
– ಕುವೆಂಪು


# ವಿಜಯ ಕಾಲ

ಪ್ರಧಾನ ಸಂಪಾದಕ: ಕೆ. ದೀಪಕ್

ಓದುಗರ ಒಡಲಾಳ

ಬೆಳಗಿನ ಕನ್ನಡ ದಿನಪತ್ರಿಕೆ

ಮೈಸೂರು | ಚಾಮರಾಜನಗರ | ಮಂಡ್ಯ | ಬೆಂಗಳೂರು

RNI:KARKAN/2017/74098 | ಸಂಪುಟ: 8 ಸಂಚಿಕೆ: 2 | ಭಾನುವಾರ 2 ನವೆಂಬರ್ 2025 | ದೂರವಾಣಿ – 9741511340 – 8123436767 | ಪುಟ–8 | ಬೆಲೆ: ರೂ. 3




# ಶುರುವಾಯ್ತು ವಿಜಯಕಾಲ

## ಸಭಾಪತಿ ಯು.ಟಿ.ಖಾದರ್ ರಿಂದ ಪತ್ರಿಕೆ, ಪ್ರಕಾಶ್ ರಾಜ್‌ರಿಂದ ವೆಬ್‌ಸೈಟ್, ಡಾ.ಯತೀಂದ್ರ ಸಿದ್ದರಾಮಯ್ಯರಿಂದ ಲಾಂಛನ ಬಿಡುಗಡೆ

**ಮೈಸೂರು:** ಹಿರಿಯ ಪತ್ರಕರ್ತ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ, ಪ್ರಗತಿಪರ ಚಿಂತಕ ಕೆ. ದೀಪಕ್ ಅವರ ಸಾರಥ್ಯದಲ್ಲಿ ವಿಜಯ ಕಾಲ ಪ್ರಾದೇಶಿಕ ದಿನಪತ್ರಿಕೆ, ವೆಬ್‌ಸೈಟ್, ಡಿಜಿಟಲ್ ಮಾಧ್ಯಮ ಉದ್ಘಾಟನಾ ಕಾರ್ಯಕ್ರಮ ಅರ್ಥಪೂರ್ಣವಾಗಿ ನೆರವೇರಿತು. ಗಣ್ಯರು, ಬಂಧುಮಿತ್ರರು, ಪತ್ರಕರ್ತರು, ವಿವಿಧ ಕ್ಷೇತ್ರದ ಮಹನಿಯರು ಒಂದೆಡೆ ಸ್ಥೆರಿದ್ದರಿಂದ ಸಂಭ್ರಮದ ವಾತಾವರಣ ನಿರ್ಮಾಣಗೊಂಡಿತ್ತು.

ಮೈಸೂರು ವಿಶ್ವವಿದ್ಯಾಲಯದ ವಿಜ್ಞಾನ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪತ್ರಿಕೆಯನ್ನು ವಿಧಾನ ಸಭಾಧ್ಯಕ್ಷರಾದ ಯು.ಟಿ.ಖಾದರ್ ಲೋಕಾರ್ಪಣೆ ಮಾಡಿದರು. ವಿಧಾನ ಪರಿಷತ್ ಸದಸ್ಯರಾದ ಡಾ. ಯತೀಂದ್ರ ಸಿದ್ದರಾಮಯ್ಯ ಡಿಜಿಟಲ್ ಮಾಧ್ಯಮದ ಲಾಂಛನ ಬಿಡುಗಡೆ ಮಾಡಿದರೆ, ಪಂಚಭಾಷಾ ನಟ ಪ್ರಕಾಶ್ ರಾಜ್ ವೆಬ್ ಸೈಟ್ ಅನಾವರಣಗೊಳಿಸಿದರು. ಇದೇ ವೇಳೆ ಹಿರಿಯ ಪತ್ರಕರ್ತರಾದ ಡಿ.ಮಹದೇವಪ್ಪ, ನೂತನವಾಗಿ ವಿಧಾನ ಪರಿಷತ್ ಸದಸ್ಯರಾಗಿ ನೇಮಕಗೊಂಡಿರುವ ಪತ್ರಕರ್ತ ಕೆ.ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು. ಮಾಜಿ ಶಾಸಕರಾದ ಹೆಚ್.ಪಿ.ಮಂಜುನಾಥ್ ಸರ್ವರನ್ನೂ ಸ್ವಾಗತಿಸಿದರು.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಹೆಚ್.ಸಿ. ಮಹಾದೇವಪ್ಪ, ಮಾಜಿ ಶಾಸಕರಾದ ಜಿ.ಟಿ.ದೇವೇಗೌಡ, ಮಾಜಿ ವಿಧಾನ ವಿಧಾನ ಪರಿಷತ್‌ನ ಮಾಜಿ ಸದಸ್ಯರಾದ ಕೆ.ಸಿ.ಪುಟ್ಟಸಿದ್ದ ಶೆಟ್ಟಿ, ಇತಿಹಾಸ ತಜ್ಞ ಪ್ರೊ. ನಂಜರಾಜೇ ಅರಸ್, ಮೈಸೂರು ಜಿಲ್ಲಾ ಹೋಟೇಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಪ್ರತಿನಿಧಿ ಪತ್ರಿಕೆ ಸಂಪಾದಕರಾದ ಸಿ.ಕೆ.ಮಹೇಂದ್ರ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಹಿರಿಯ ಪತ್ರಕರ್ತರಾದ ಬಾಲಕೃಷ್ಣ ಮದ್ದೂರು, ಮುಳ್ಳೂರು ರಾಜು, ಪ್ರಗತಿ ಗೋಪಾಲಕೃಷ್ಣ, ಕೊಳ್ಳೇಗಾಲ ಮಹೇಶ್, ಒಕ್ಕಲಿಗರ ವಿಕಾಸ ವೇದಿಕೆಯ ಅಧ್ಯಕ್ಷೆ ಯಮುನಾ, ವಕೀಲರಾದ ಅರವಿಂದ್, ತಿಮ್ಮಯ್ಯ, ಕಾಂತರಾಜು, ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷರಾದ ಡಾ.ಬಿ.ಜೆ.ವಿಜಯ್ ಕುಮಾರ್, ಎಪಿ ಪ್ರಾಪರ್ಟೀಸ್ ಮಾಲೀಕರಾದ ನಾಗೇಶ್, ಕನ್ನಡ ಪರ ಹೋರಾಟಗಾರರಾದ ಮೂಗೂರು ನಂಜುಂಡಸ್ವಾಮಿ ಸೇರಿ ವಿವಿಧ ಸಂಘಟನೆಗಳ ಮುಖಂಡರು, ಸ್ನೇಹಿತರು, ಅಭಿಮಾನಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

## 'ಮಾಧ್ಯಮ ಇಲ್ಲದಿದ್ದರೆ ಪ್ರಜಾಪ್ರಭುತ್ವ ಉಳಿಯಲ್ಲ': ಡಾ. ಎಚ್.ಸಿ.ಮಹದೇವಪ್ಪ



**ಮೈಸೂರು:** ಸರಕಾರ ಇರದಿದ್ದರೂ ಪ್ರಜಾಪ್ರಭುತ್ವ ಇರುತ್ತದೆ. ಆದ–ರೆ, ಮಾಧ್ಯಮ ಇಲ್ಲದಿದ್ದರೆ ಪ್ರಜಾಪ್ರಭುತ್ವ ಉಳಿಯುವುದಿಲ್ಲ. ಈ ನಿಟ್ಟಿನಲ್ಲಿ ಈವರೆಗೆ ಬದ್ಧತೆ ಮತ್ತು ಪ್ರಾಮಾಣಿಕವಾಗಿ ನಡೆದುಕೊಂಡಿರುವ ಪತ್ರಕರ್ತ ಕೆ.ದೀಪಕ್ ವಿಜಯಕಾಲ ದಿನಪತ್ರಿಕೆಯನ್ನು ಯಶಸ್ವಿಯಾಗಿ ಮುನ್ನಡೆಸಲಿದ್ದಾರೆ ಎಂಬ ವಿಶ್ವಾಸ ನನಗಿದೆ ಎಂದು ಸಮಾಜ ಕಲ್ಯಾಣ ಸಚಿವರೂ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಹೆಚ್.ಸಿ. ಮಹಾದೇವಪ್ಪ ತಿಳಿಸಿದರು.

ಕಾರ್ಯಕ್ರಮ ಆರಂಭಕ್ಕೂ ಮುನ್ನ ಆಗಮಿಸಿ ಶುಭ ಹಾರೈಸಿ ಮಾತನಾಡಿದ ಅವರು, ಗಾಂಧೀಜಿ ಅವರು ಜನರ ಧ್ವನಿಯಾಗಿ ಕೆಲಸ ಮಾಡಿದ್ದರೆ, ಅಂಬೇಡ್ಕರ್ ಧ್ವನಿ ಇಲ್ಲದವರಿಗೆ ಧ್ವನಿಯಾಗುವಂತೆ ಪತ್ರಿಕೆ ಮಾಡಿದ್ದರು. ಅಮೆರಿಕಾದ ಅಧ್ಯಕ್ಷರಾಗಿದ್ದ ಥಾಮಸ್ ಜಾಫರ್ ಸನ್ ಅವರು ಸರ್ಕಾರ ಇಲ್ಲದೇ ಇದ್ದರೂ ಪ್ರಜಾಪ್ರಭುತ್ವ ಇರುತ್ತದೆ. ಆದರೆ ಮಾಧ್ಯಮ ಇಲ್ಲದೇ ಇದ್ದರೆ ಪ್ರಜಾಪ್ರಭುತ್ವ ಉಳಿಯುವುದಿಲ್ಲ ಎಂದು ಹೇಳಿದ್ದರು. ಈ ಮಾತು ಪ್ರಜಾಪ್ರಭುತ್ವದಲ್ಲಿ ಮಾಧ್ಯಮ ಎಷ್ಟು ಮುಖ್ಯ ಎನ್ನುವುದನ್ನು ತಿಳಿಸುತ್ತದೆ.

ಸಮಾಜ ಮತ್ತು ಸಂವಿಧಾನದ ಬಗ್ಗೆ ಅಪಾರ ಕಾಳಜಿ ಹೊಂದಿರುವ ಪತ್ರಕರ್ತ ಕೆ. ದೀಪಕ್ ಅವರು ಪತ್ರಿಕೆಯನ್ನು ಉತ್ತಮ ರೀತಿಯಲ್ಲಿ ತರುತ್ತಾರೆ. ಸಾಗಲಿ. ಅವರಿಗೆ ಇಲ್ಲಿಂದ ವಿಜಯ ಕಾಲ ಪ್ರಾರಂಭವಾಗಲಿ ಎಂದು ಶುಭ ಹಾರೈಸಿದರು.

## ವಿಜಯಕಾಲ ಪತ್ರಿಕೆ ಸಿದ್ಧಾಂತದ ಶಕ್ತಿ ಕೇಂದ್ರವಾಗಲಿ: ಯು.ಟಿ.ಖಾದರ್

**ಮೈಸೂರು:** ಪತ್ರಕರ್ತ ಕೆ. ದೀಪಕ್ ಅವರ ನೇತೃತ್ವದಲ್ಲಿ ಆರಂಭ ಕಂಡಿರುವ ವಿಜಯಕಾಲ ಪತ್ರಿಕೆ ಉತ್ತಮವಾಗಿ ಮುನ್ನಡೆಯುತ್ತದೆ ಎನ್ನುವ ವಿಶ್ವಾಸ ಇದೆ. ಪತ್ರಿಕೆಯು ಜಾತ್ಯಾತೀತ ಸಿದ್ಧಾಂತರ ಶಕ್ತಿ ಕೇಂದ್ರವಾಗಲಿ ಎಂದು ವಿಧಾನಸಭಾ ಸಭಾಪತಿಗಳಾದ ಯು.ಟಿ. ಖಾದರ್ ಆಶಿಸಿದರು.

ವಿಜಯಕಾಲ ದಿನಪತ್ರಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಜನರ ಕಷ್ಟಗಳ ಕಡೆಗೆ ಜನಪ್ರತಿನಿಧಿಗಳು, ಅಧಿಕಾರಿಗಳ ಗಮನ ಸೆಳೆಯುವ ಕೆಲಸವನ್ನು ಪತ್ರಕರ್ತರು ಮಾಡಿದರೆ, ಅವುಗಳನ್ನು ಬಗೆಹರಿಸುವ ಕೆಲಸವನ್ನು ರಾಜಕಾರಣಿಗಳು ಮಾಡಲಿದ್ದಾರೆ. ಹೀಗಾಗಿ



ಪತ್ರಕರ್ತರು ಮತ್ತು ರಾಜಕಾರಣಿಗಳು ಒಟ್ಟಾಗಿ ಕೆಲಸ ಮಾಡಬೇಕಿದೆ ಎಚಿದರು.

ವಿಜಯಕಾಲ ಪತ್ರಿಕೆ ಧ್ವನಿ, ಶಕ್ತಿ ಇಲ್ಲದವರಿಗೆ ಶಕ್ತಿ ನೀಡಿ ಶಕ್ತಿ ಕೇಂದ್ರವಾಗಲಿ. ಸಾಮಾಜಿಕ ಬದಲಾವಣೆಯ ಹೊಸ ಅಧ್ಯಾಯ ಇಲ್ಲಿಂದ ಪ್ರಾರಂಭ ಆಗಲಿ. ದೀಪಕ್ ಅವರು ತಮ್ಮ ಸಿದ್ಧಾಂತಗಳಿಗೆ ಬದ್ಧವಾಗಿ ನಡೆದುಕೊಂಡು ಬಂದಿದ್ದಾರೆ.

ಅವರ ಮುಂದಿನ ದಾರಿ ಉತ್ತಮವಾಗಿ ಸಾಗಲಿ. ಅವರಿಗೆ, ಸಿಇಒ ವಿಭಾವಸು ಮತ್ತು ತಂಡದ ಬೆನ್ನೆಲುಬಾಗಿ ನಿಂತು ಪ್ರೋತ್ಸಾಹ ಮಾಡುವ ಕೆಲಸವನ್ನು ನಾವು ಮಾಡಬೇಕಿದೆ ಎಂದು ತಿಳಿಸಿದರು.

## ದೀಪಕ್ ಅವರ ಬೆಂಬಲಕ್ಕೆ ನಾವೆಲ್ಲ ನಿಲ್ಲಬೇಕು

**ಮೈಸೂರು:** ಜಾತ್ಯಾತೀತ ಸಿದ್ಧಾಂತದ ಮೇಲೆ ಅಪಾರ ನಂಬಿಕೆ ಇಟ್ಟು ಸಮಾಜಮುಖಿ ಪತ್ರಿಕೋದ್ಯಮ ಮಾಡಿಕೊಂಡು ಬಂದಿರುವ ದೀಪಕ್ ಅವರ ವಿಜಯಕಾಲ ಪತ್ರಿಕೆಯ ಬೆಂಬಲಕ್ಕೆ ನಾವೆಲ್ಲ ನಿಲ್ಲಬೇಕು ಎಂದು ವಿಧಾನ ಪರಿಷತ್ ಸದಸ್ಯರಾದ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ವಿಜಯ ಕಾಲ ಡಿಜಿಟಲ್ ಮಾಧ್ಯಮದ ಲಾಂಛನ ಬಿಡುಗಡೆ ಮಾಡಿ ಮಾತನಾಡಿದ ಅವರು, ವಸ್ತುನಿಷ್ಠ, ಪ್ರಾಮಾಣಿಕ ಪತ್ರಿಕೋದ್ಯಮ ಉಳಿಯಬೇಕಾದದ್ದು ಇಂದಿನ ತುರ್ತು. ಈ ಕಾರಣಕ್ಕೆ ನಾವು ದೀಪಕ್ ನೇತೃತ್ವದ ವಿಜಯ ಕಾಲ ಪತ್ರಿಕೆಗೆ ಬೆಂಬಲವಾಗಿ ನಿಂತಿದ್ದೇವೆ. ಇಂದು ಶೇ. 99ರಷ್ಟು ಮಾಧ್ಯಮಗಳು ಪಟ್ಟಭದ್ರ ಹಿತಾಶಕ್ತಿಗಳ ಕೈಯಲ್ಲಿವೆ. ಯಾರು ಹೆಚ್ಚು ಹಣ ಕೊಡುತ್ತಾ–ರೋ ಅವರ ಪರವಾಗಿ ನಿಲ್ಲುವ ಕೆಲಸ ಆಗುತ್ತಿದೆ ಎಂದರು.

2014ರಿಂದ ಮಾಧ್ಯಮಗಳ ಕಾರ್ಯಪ್ರವೃತ್ತಿ ಬದಲಾಗಿದೆ. ಪ್ರಜಾಪ್ರಭುತ್ವದಲ್ಲಿ ಮಾಧ್ಯಮಗಳು ವಾಚ್ ಡಾಗ್ ರೀತಿ ಕೆಲಸ ಮಾಡಬೇಕಿದೆ. ಸರಿಯಾದ ರೀತಿಯಲ್ಲಿ ಪ್ರಶ್ನೆ ಮಾಡುವ ಕೆಲಸ ಮಾಡಬೇಕಿದೆ. ಹೀಗಾಗಿ ತತ್ವನಿಷ್ಠರು, ಉತ್ತಮ ಸಿದ್ಧಾಂತಗಳನ್ನು ಹೊಂದಿರುವ ದೀಪಕ್ ಅವರು ಮಾಧ್ಯಮ ನಡೆಸಬೇಕು. ಅದಕ್ಕೆ ನಮ್ಮ ಬೆಂಬಲ ಇರಲಿದೆ ಎಂದು ಹಾರೈಸಿದರು.

## ಸಂಸದ ಯದುವೀರ್‌ಗೆ ಗೌರವ ಸಮರ್ಪಣೆ




ಸುದ್ದಿ: 8ನೇ ಪುಟದಲ್ಲಿ


## ಪ್ರಕಾಶ್‌ರಾಜ್ ಕಂಡುಕೊಂಡ ಮೂರು ಕೋರ್ಟ್..!

**ಮೈಸೂರು:** 'ಇಂದು ದೇಶದಲ್ಲಿ ಮೂರು ಕೋರ್ಟ್‌ಗಳು ಕೆಲಸ ಮಾಡುತ್ತಿವೆ. ಒಂದು ಸಂವಿಧಾನಿಕ ಕೋರ್ಟ್, ಎರಡನೆಯದು ಮೀಡಿಯಾ ಕೋರ್ಟ್, ಮೂರನೆಯದು ಶೋಷಿಯಲ್ ಮೀಡಿಯಾ ಕೋರ್ಟ್. ದೇಶದಲ್ಲಿ ಈ ಮೂರೂ ಕೋರ್ಟ್‌ಗಳಿಗೆ ಜವಾಬ್ದಾರಿ ಇಲ್ಲದಂತ್ತಾಗಿದೆ ? ಹೀಗೆ ಮಾಧ್ಯಮಗಳನ್ನು ವಿಡಂಬನೆ ಮಾಡಿದವರು ಖ್ಯಾತ ಪಂಚ ಭಾಷಾ ನಟ, ಜನಪರ ಹೋರಾಟಗಾರರಾದ ಪ್ರಕಾಶ್ ರಾಜ್. ವಿಜಯಕಾಲ ಪತ್ರಿಕೆಯ ವೆಬ್‌ಸೈಟ್ ಬಿಡುಗಡೆಗೊಳಿಸಿ ಮಾತನಾಡಿದರು.

'ಗೆಳೆಯ ದೀಪಕ್ ನೀವು ಎಲ್ಲದಕ್ಕೂ ರಿಯಾಕ್ಟ್ ಮಾಡಬೇಡಿ. ನಾವೆಲ್ಲ ಅನ್ನ ತಿನ್ನುವವರು, ಕೆಲವರು ಬೇರೇನೋ ತಿಂ–ದು ಮಾತನಾಡುತ್ತಾರೆ. ಇದಕ್ಕೆಲ್ಲ ನಾವು ಪ್ರತಿಕ್ರಿಯೆ ನೀಡಬಾರದು. ಭಾಷೆಯ ಮೇಲೆ ಹಿಡಿತವಿರಬೇಕು. ಒಳ್ಳೆಯ ಪತ್ರಿಕೋದ್ಯಮ ಮಾಡುತ್ತೀರಿ ಎಂಬ ನಂಬಿಕೆ ನನಗಿದೆ?.



ದೀಪಕ್‌ರವರು ನನಗೆ 20 ವರ್ಷಗಳಿಂದ ಒಳ್ಳೆಯ ಸ್ನೇಹಿತರು. ನಾನು ಸ್ನೇಹಿತ ಎಂಬ ಕಾರಣಕ್ಕೆ ಇಲ್ಲಿಗೆ ಬಂದಿಲ್ಲ. ಬದಲಿಗೆ ಅವರಿಂದ ಈ ಸಮಾಜಕ್ಕೆ ಒಳ್ಳೆಯ ಕೆಲಸ ಆಗಲಿದೆ ಎಂಬ ನಂಬಿಕೆ ಇದೆ. ಜನಪರ ಧ್ವನಿಯಾಗಿ ಪತ್ರಿಕೆ ಮಾಡಲಿದ್ದಾರೆ ಎಂಬ ವಿಶ್ವಾಸವಿದೆ ಎಂದರು.

ಕನ್ನಡ, ಕನ್ನಡತನ, ಕರ್ನಾಟಕ ಎಂದ–ರೆ ವಚನ ಸಾಹಿತ್ಯ, ಕುವೆಂಪು ಅವರ ವಿಶ್ವ ಮಾನವ ಸಂದೇ?ಶ. ಸರ್ವಜನಾಂಗದ ಶಾಂತಿಯ ತೋಟ. ನೂರು ಮತದ ಹೊಟ್ಟ ತೂರಿ ಎಲ್ಲ ತತ್ವದೆಲ್ಲೆ ಮೀರಿ ನಿರ್ದಿಗಂತವಾಗಿರುವುದೇ ಕರ್ನಾಟಕದ ಅಸ್ಮಿತೆ. ದೀಪಕ್ ಅವರು ನೇರ ನಿಷ್ಠೂರವಾಗಿ ಮಾತನಾಡುತ್ತಾರೆ. ನಮಗೆ ನಿಷ್ಠೂರ ಪತ್ರಿಕೋದ್ಯಮ ಎಂದಾ–ಕ್ಷಣ ಮೇಷ್ಟ್ರು ಲಂಕೇಶ್ ನೆನಪಾಗುತ್ತಾರೆ. ಅವರನ್ನು ಬಿಟ್ಟು ಬೇರೆಯವರನ್ನು ನೆನಪು ಮಾಡಿಕೊಳ್ಳಲು ಆಗುವುದಿಲ್ಲ ಎಂದರು.

## 'ವಿಜಯಕಾಲ ನ್ಯಾಯಪರವಾಗಿ ನಿಲ್ಲುವ ವಿಶ್ವಾಸವಿದೆ'

**ಮೈಸೂರು:** ದೀಪಕ್ ಅವರು ಪತ್ರಕರ್ತರ ಸಂಘದ ಅಧ್ಯಕ್ಷರಾಗಿ, ಪತ್ರಕರ್ತರಾಗಿ ಪ್ರಾಮಾಣಿಕತೆ, ಬದ್ಧತೆ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಸಮಾಜಕ್ಕೆ ಒಳ್ಳೆಯದನ್ನು ಮಾಡಬೇಕು ಎನ್ನುವ ಹಂಬಲ ಅವರಲ್ಲಿದೆ ಎಂದು ಮಾಜಿ ಸಚಿವರು, ಶಾಸಕರಾದ ಜಿ.ಟಿ.ದೇವೇಗೌಡ ಅಭಿಪ್ರಾಯಪಟ್ಟರು.

ದೀಪಕ್ ಅವರಲ್ಲಿ ಪ್ರತಿಭೆ ಇದೆ, ಅದ–ಕ್ಕೆ ತಕ್ಕಂತೆ ಹೊಸ ಪತ್ರಿಕೆ ಮಾಡಿದ್ದಾರೆ. ಮಹಾತ್ಮಾ ಗಾಂಧಿ, ಅಂಬೇಡ್ಕರ್ ಅವರು ಸಾಗಿದ ದಾರಿಯಲ್ಲಿ ಕೆ. ದೀಪಕ್ ಮತ್ತು ಇಡೀ ಪತ್ರಿಕಾ ಬಳಗ ಸಾಗಲಿ. ಆದರೆ ಇಂದು ದುಡ್ಡು ಮಾಡುವುದಕ್ಕಾಗಿಯೇ ಕೆಲವರು ನಿಂತಿದ್ದಾರೆ. ಇವರ ನಡುವಲಿ ?ಲಸತ್ಯವಾಗಿ ಕೆಲಸ ಮಾಡುವವರಿಗೆ ಹೆಚ್ಚಿನ ಶಕ್ತಿ ತುಂಬುವ ಕೆಲಸ ಮಾಡಬೇಕಾಗಿದೆ. ಕನ್ನಡ ರಾಜ್ಯೋತ್ಸವದ ದಿನವೇ ಪತ್ರಿಕೆ ಆರಂಭವಾಗಿರುವುದು ಸಂತೋಷದ ಸಂಗತಿ, ವಿಜಯ ಕಾಲ ನ್ಯಾಯದ ಪರವಾಗಿ, ಬಡವರ ಪರವಾಗಿ ಇರಲಿ ಎಂದು ಶುಭ ಹಾರೈಸಿದರು.

ವಿಜಯ ಕಾಲ



■ ಮಾ. ವೆಂಕಟೇಶ
ಲೇಖಕರು

# ನಮ್ಮೂರ ಪೌರಾಣಿಕ ನಾಟಕ

## ಮರೆಯಾಗುತ್ತಿದೆ ಗ್ರಾಮೀಣ ಜನರ ಮನರಂಜನೆಯ ಮಾಧ್ಯಮ

'**ಕ**ಲಾಭಿಮಾನಿಗಳಲ್ಲಿ ವಿನಂತಿ, ಗ್ರಾಮದೇವತೆ ಹಬ್ಬದ ಪ್ರಯುಕ್ತ ಇಂದು ರಾತ್ರಿ 10:30ಕ್ಕೆ ಸರಿಯಾಗಿ ಶ್ರೀ ಚಾಮುಂಡೇಶ್ವರಿ ಕೃಪಾ ಪೋಷಿತ ನಾಟಕ ಮಂಡಳಿಯವರಿಂದ 'ಶ್ರೀಕೃಷ್ಣ ವಿಜಯ' ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುತ್ತಿದ್ದೇವೆ. ತಾವುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನಾಟಕವನ್ನು ಯಶಸ್ವಿಗೊಳಿಸಬೇಕಾಗಿ ಮನವಿ. ಮೈಸೂರಿನ ಹೆಸರಾಂತ ಕಲಾವಿದೆ ನೇತ್ರಾವತಿ ಅವರಿಂದ ಅಮೋಘವಾದ ನೃತ್ಯವಿದೆ. ಮರೆಯದೆ ನೋಡಿ, ಮರೆತು ನಿರಾಶರಾಗದಿರಿ...'

ಮೈಕ್‌ನಲ್ಲಿ ಈ ರೀತಿ ಅನೌನ್ಸ್ ಮಾಡುತ್ತಾ ಸಂಘಟಕರು ಪ್ರಚಾರ ಮಾಡುತ್ತಿದ್ದರೆ ಮತ್ತೊಂದೆಡೆ ಮಂಡ್ಯದ ಡ್ರಾಮ ಸೀನರಿ ಕಂಪನಿಯವರು ರಂಗುರಂಗಿನ ಸ್ಟೇಜ್ ಹಾಕುವಲ್ಲಿ ಭರದಿಂದ ಕೆಲಸ ಮಾಡುತ್ತಿದ್ದಾರೆ. ಊರಿನ ಮಕ್ಕಳು ಸ್ಟೇಜ್ ಮುಂದೆ ಬಂದು ಅಲ್ಲಿನ ಹಾಡಿಗೆ ಕುಣಿದು ಕುಪ್ಪಳಿಸುತ್ತಿದ್ದಾರೆ. ಯುವಕರು ಸ್ಟೇಜ್ ಹಾಕುವುದನ್ನೇ ನೋಡುತ್ತಾ ನಿಂತಿದ್ದಾರೆ. ಹಿರಿಯರು ಅಲ್ಲಿನ ಕಲ್ಲಿನ ಪಡಸಾಲೆಯಲ್ಲಿ ಕುಳಿತು ಬೀಡಿ ಸೇದುತ್ತಾ ಮಾರ್ಗದರ್ಶನ ಮಾಡುತ್ತಿದ್ದಾರೆ.

ನಾಟಕದಲ್ಲಿ ಅಭಿನಯಿಸುವ ಕಲಾವಿದರಿಗೆ ಸಂಭ್ರಮವೋ ಸಂಭ್ರಮ. ತಲೆ ಕೂದಲು ಕಟಿಂಗ್ ಮಾಡಿಸ್ಕೊಂಡು, ನುಣ್ಣಗೆ ಮೀಸೆ–ಗಡ್ಡ ಬೋಳಿಸ್ಕಂಡು, ಮೈಕೈ ರವರವನೆ ಹೊಳೆಯುವಂತೆ ಮೈಸೂರ್ ಸ್ಯಾಂಡಲ್ ಸೋಪಲ್ಲಿ ಸ್ನಾನ ಮಾಡಿ, ಘಮ್ಮೆನ್ನುತ್ತಾ, ಬಿಳಿ ಪಂಚೆ, ಬಿಳಿ ಶರ್ಟ್ ಹಾಕೊಂಡು, ಮದುಮಗನಂತೆ ಸಿಂಗರಿಸಿಕೊಂಡು ಮನೆಯಲ್ಲಿ ತಯಾರಾಗುವುದು. ಅಪ್ಪ ಗೊಣಗುತ್ತಲೇ ಮಗನ ನಾಟಕದ ಖಯಾಲಿಗೆ ಪ್ರೋತ್ಸಾಹಿಸುತ್ತಿದ್ದರೆ, ಅಮ್ಮ ಮೆಣಸಿನ ಹಾಲು ಕಾಯಿಸಿ ಮಗನ ಗಂಟಲು ಚೆನ್ನಾಗಿ ಇರಲಿ ಎಂದು ದೊಡ್ಡ ಲೋಟದಲ್ಲಿ ಹಿಡ್ಕೊಂಡು ಬಂದು ಮಗನಿಗೆ ಕೊಡುವುದು. ಆತ ಹಬ್ಬದೂಟ ಮಾಡಿ, ಹಾಲು ಕುಡಿದು, ಅಪ್ಪ ಅಮ್ಮನ ಕಾಲಿಗೆ ಬಿದ್ದು ಆಶೀರ್ವಾದ ತಕೊಂಡು ಯುದ್ಧಕ್ಕೆ ಹೋಗೊ ಸೈನಿಕನಂತೆ ಎದೆಯುಬ್ಬಿಸಿ ಬಿರ್‌ಬಿರ್ನೆ ಮನೆಯಿಂದ ಹೊರಗೆ ಹೊರಡುವುದು. ದಾರಿಯಲ್ಲಿ ಹೋಗುವಾಗ ಊರಿನ ಮಂದಿ ನನ್ನನ್ನೇ ನೋಡುತ್ತಿದ್ದಾರೇನೋ ಎನ್ನುವ ಸಂಕೋಚದಲ್ಲಿಯೇ ಹೆಜ್ಜೆಯಿಟ್ಟು ನಡೆಯುತ್ತಿದ್ದರೆ, ದೇವಸ್ಥಾನದ ಮುಂದೆ ಕುಳಿತಿದ್ದ ವೃದ್ಧರೊಬ್ಬರು 'ಲೋ ಮಾದ ಇವತ್ತು ಬಾಳ ಚಂದಾಗ್ ಕಾಣ್ತಿದ್ಯಾ. ಭೀಮನ್ ಪಾರ್ಟ್ನುವೇ ಚೆನ್ನಾಗ್ ಮಾಡ್ಬೇಕು. ತಿಳಿತಾ?'. ತಾತನ್ ಮಾತ್ಗೆ ಊಂ ಅಂತ ತಲೆಯಾಡ್ಸಿ ಬಾಯಿಬುಟ್ಕಂಡು ನಗ್ತಾ ಮುಂದಕ್ಕೆ ಹೊರಟ.

ಊರಿನ ಜನ ನಾಟಕ ನೋಡಕ್ಕೆ ಸ್ಟೇಜ್ ಹಾಕಿದ್ದ ಆ ಬೀದಿಯಲ್ಲಿ ತಮ್‌ತಮ್ ಚಾಪೆಗಳನ್ನ, ತಮ್‌ತಮ್ ಜಮ್‌ಖಾನನ ಹಾಸಿಟ್ಟು ಜಾಗನ ರಿಸರ್ವೇಶನ್ ಮಾಡಿದ್ರು. ಇನ್ನೂ ಕೆಲವರು ಆಗ್ಲೆ ಬಂದು ಮುಂದಿನ ಸಾಲುಗಳಲ್ಲಿ ಕುಳಿತಿದ್ರು. ಸ್ಟೇಜ್‌ನ ಅಕ್ಕಪಕ್ಕ ಯುವಕರ ಗುಂಪು ಜಮಾಯಿಸಿತ್ತು. ಹಾರ್ಮೋನಿಯಮ್ ಮಾಸ್ಟ್ರು ಮೊದಲ ಸಾಲಿನಲ್ಲಿ ಹಾಕಿದ್ದ ಖುರ್ಚಿಯಲ್ಲಿ ಕುಳಿತ್ಕೊಂಡು ಟೀ ಕುಡಿತಾ ಪಕ್ಕದಲ್ಲಿ ಕುಳಿತ್ತಿದ್ದಾ ಪಿಟೀಲು ನುಡಿಸುವಾತನೊಂದಿಗೆ ಮಾತುಕತೆಯಲ್ಲಿ ಮಗ್ನರಾಗಿದ್ರು. ತಬಲ ಬಾರಿಸುವವ ಶ್ರುತಿ ಮಾಡಿಕೊಳ್ಳುತ್ತಿದ್ದ. ಇತರ ವಾದ್ಯಗಾರರು ತಮ್ಮತಮ್ಮ ವಾದ್ಯಗಳನ್ನು ನುಡಿಸಲು ಸಜ್ಜಾಗುತ್ತಿದ್ದರು.

ಸ್ಟೇಜಿನ ಹಿಂಭಾಗ ಕಲಾವಿದರಿಗೆ ವರ್ಣಾಲಂಕಾರ, ವಸ್ತ್ರಾಲಂಕಾರ ಮಾಡುವ ಕೆಲಸ ಭರದಿಂದ ನಡೆದಿತ್ತು. ಬಿರುಸಿನಿಂದ ಬಂದ ಮಾದ ಅಲ್ಲಿಟ್ಟಿದ್ದ ದೊಡ್ಡ ಕನ್ನಡಿಯೊಳಗೆ ಒಂದ್ಸಾರಿ ಮುಖ ನೋಡ್ಕೊಂಡು ಪಕ್ಕದಲ್ಲಿ ಬಣ್ಣ ಹಾಕೊಂಡು ನಿಂತಿದ್ದ ನಂಜಣ್ಣನ ಜೊತೆ ಮಾತಾಡಿ 'ಕೃಷ್ಣ ಪಾತ್ರವ ಬಾಳ ಚೆನ್ನಾಗ್ ಮಾಡ್ಬೇಕು' ಅಂದ. ಆಗ ಕೈಯಲ್ಲಿ ಕೋಳಲು ಹಿಡಿದಿದ್ದ ನಂಜಣ್ಣ 'ಅಯ್ಯೋ ಮುದೇವಿ ಮೊದ್ಲು ಭೀಮ ಪಾತ್ರವ ನೆಟ್ಗೆ ನೀ ಮಾಡು' ಅಂದವನು ತಿರ್ಗ್ಕೊಂಡು ನೆಟ್ಟಗೆ ಹೋದ ನಂಜಣ್ಣನ ನೋಡಿ ಮಂಗನ ಮುಸುಡಿ ಮಾಡ್ಕಂಡ ಮಾದ ಮತ್ತೊಮ್ಮೆ ಕನ್ನಡಿಲಿ ಮುಖ ನೋಡ್ಕಂಡು ಬಣ್ಣದ ಪೆಟ್ಟಿಗೆಗೆ ನಮಸ್ಕಾರ ಮಾಡಿ, ಬಣ್ಣ ಹಾಕುವವನ ಕೈಗೆ ನೂರು ರೂಪಾಯಿ ತುರ್ಕಿ 'ಅಣ್ಣೋ ವಸ ವಸ ಡ್ರಸ್ ಹಾಕಿ, ಮೇಕಪ್ ಚೆನ್ನಾಗ್ ಮಾಡು' ಅಂದ. ಆತ ನೂರು ರೂಪಾಯಿ ನೋಟ್ನ ಜೇಬಿಗೆ ಇಳಿಸಿಕೊಂಡು, ಬಣ್ಣದ ಬ್ರಸ್ನ ಎತ್ತುಕೊಂಡು ಮುಖಕ್ಕೆ ಬಳಿಯತೊಡಗಿದ.

ಸೂತ್ರಧಾರಿ ಮೊದಲಿಗೆ ವೇದಿಕೆಗೆ ಬಂದು ಪ್ರಾರ್ಥನಾಗೀತೆ ಹಾಡಿ, ನಾಟಕದ ಆರಂಭಕ್ಕೆ ನಾಂದಿಯಾಡಿದ. ನಾಟಕದ ದರ್ಬಾರ್ ಸೀನ್ ಆರಂಭವಾಯಿತು. ಇಬ್ಬರು ನರ್ತಕಿಯರು ಬಂದು ಡ್ಯಾನ್ಸ್ ಮಾಡತೊಡಗಿದರು. ನಾಟಕ ನೋಡಲು ಕಿಕ್ಕಿರಿದು ತುಂಬಿದ ಜನರ ಮಧ್ಯೆ ಹಲವರು ಎದ್ದು ಎದ್ದು ಕುಕ್ಕರಗಾಲಲ್ಲಿ ಕುಳಿತುಕೊಂಡು ನೋಡುತ್ತಿದ್ದರೆ, ಹಿಂದೆ ಕುಂತವರು ಆತನ ಕೆಳಗೆ ಕೂತ್ಕೋ ಎಂದು ಶರಟು ಹಿಡಿದು ಎಳೆಯುತ್ತಿದ್ದರು. ಮುದುಕರು ಬೊಚ್ಚಬಾಯಿ ಬಿಟ್ಕಂಡು ನರ್ತಕಿಯರ ನೋಡುತ್ತಾ ಇದ್ದರು. ಸುತ್ತಮುತ್ತ ನಿಂತಿದ್ದ ಯುವಕರ ಪಡೆ ಚಪ್ಪಾಳೆ ಹಾಕೊದೇನು, ಸಿಳ್ಳೆ ಹೊಡೆಯೊದೇನು! ಅಬ್ಬಾಬ್ಬಾ ಸಂಭ್ರಮವೋ ಸಂಭ್ರಮ.

ಯುವಕರ ಗುಂಪಿನಲಿ ಒಬ್ಬ ಇನ್ನೊಬ್ಬನನ್ನು ಉದ್ದೇಶಿಸಿ 'ಲೋ ನಾಟಕ ನೋಡೊ ಅಂದ್ರೆ ಅಲ್ಲೇನು ನೋಡ್ತಿದ್ಯಾ' ಅದಕ್ಕೆ ಅವನು 'ಐಯ್.. ನಮ್ ಹುಡ್ಗಿ ಬಂದ್ ಕುಂತೌಳೆ ನೋಡ್ತಾವ್ನಿಕಂಡ್ಲ". "ಈ ವಿಸ್ಯ ಅವ್ರಪ್ಪಂಗೆ ಗೊತ್ತಾಗ್ಲಿ, ನಿನ್ ಚರ್ಮ ಸುಲಿತಾನೆ.' 'ಏ... ನಮ್ ಮಾವ ಬಹಳ ಒಳ್ಳೇರು, ಅಂಗ್ ಮಾಡಕ್ಕಿಲ್ಲ ಕಂಡ್ಲ. "ಹಿಂಗೆ ಮಾಡ್ತಿರೂ ಮುಂದೈತೆ ಮಾರಿ ಹಬ" ಗೆಳೆಯನ ಮಾತು ಕೇಳಿ ನಕ್ಕು ಅವನ ಬೆನ್ನಿಗೆ ಒಂದು ಗುದ್ದು ಹಾಕಿ ನಾಟಕದ ದೃಶ್ಯದ ಕಡೆ ಗಮನವರಿಸಿ ನಿಂತುಕೊಂಡನು.

ಸ್ಟೇಜ್ ಮೇಲೆ ನಾಟಕದ ದೃಶ್ಯ ನಡೆಯುತ್ತಿತ್ತು. ಸೈಡ್‌ವಿಂಗ್ ಪಕ್ಕದಲ್ಲಿ ಭೀಮನ ಪಾತ್ರಧಾರಿ ಮಾದ ಇಣುಕಿ ನೋಡಿ ಯಾರನ್ನೊ ಕೈಬೀಸಿ ಕರೆಯುತ್ತಿದ್ದ. ಆಮೇಲೆ ಹಿಂಬದಿಯತ್ತ ಹೊರಟ. ಆ ವ್ಯಕ್ತಿ ಮಾದನನ್ನು ಹುಡುಕಿಕೊಂಡು ಸ್ಟೇಜಿನ ಹಿಂಭಾಗಕ್ಕೆ ಬಂದ. ಆತನನ್ನು ನೋಡಿದ ತಕ್ಷಣ ಕೋಪದಿಂದ ಕೆರಳಿದ ಭೀಮ ಮಾದ 'ಲೋ ನಿನಗೆ ಹಾರತಂದ್ಕೊಟಿದ್ದು ನಂಗ್ ಹಾಕು ಅಂತ. ನೀ ನೋಡಿದ್ರೆ ಅವನ್ಗೆ ಹಾಕಿದ್ಯಲ್ಲೋ. 'ಬಾವೋ ಬಣ್ಣ ಹಾಕಿದ್ರಿಂದಎಲ್ಲಾ ಒಂದೇತರ ಕಾಣ್ತಿದ್ರಿ ನಿನ್ ಮುಸುಡಿ ಗೊತ್ತಾಗ್ಲಿಲ್ಲ. ಅವನ್ಗೆ ಹಾಕ್ಬಿಟ್ಟೆ!' ಕ್ವಾಟ್ರು ಜಾಸ್ತಿಯಾದ್ರೆ ಇನ್ನೇನು ಮಾಡಿಯಾ, ನಾಟ್ಕ ಮುಗಿಲಿ ನಿಂಗ್ ಮಾಡ್ತಿನಿ. 'ಕ್ವಾಪ ಮಾಡ್ಕಬೇಡ ಬಾವೋ, ಅವ್ನು ಪಾರ್ಟ್ ಮುಗ್ಸಿ ಹಿಂದ್ಕೆ ಬರ್ಲಿ ಕಿತ್ಕೊಂಡ್ ಬಂದು ನಿಂಗ್ ಹಾಕ್ತಿನಿ' ಅಂದವನೆ ಯಾವ ಉತ್ತರಕ್ಕೂ ಕಾಯದೆ ಪೌರುಷದಿಂದ ಪಕ್ಕಕ್ಕೆ ತೂರಾಡಿಕೊಂಡು ಹೊರಟನು. ಮಾದ ಗದೆ ಎತ್ತಿಕೊಂಡು ಹೆಗಲಗೇರಿಸಿ, ಸ್ಟೇಜ್ ಕಡೆ ಹೊರಟ.

ಭೀಮನ ಪಾತ್ರಧಾರಿ ಮಾದ ದ್ರೌಪದಿಯೊಂದಿಗೆ ಡುಯಟ್ ಹಾಡುತ್ತಿರುವನು. ಪ್ರೇಕ್ಷಕರು ಕೂಗುತ್ತಾ, ಕಿರುಚುತ್ತಾ, ಚಪ್ಪಾಳೆ ಹೊಡೆಯುತ್ತಾ ಪ್ರೋತ್ಸಾಹಿಸುತ್ತಿದ್ದರು. ಆ ಜನರ ಮಧ್ಯೆ ಕುಳಿತಿದ್ದ ಮಾದನ ತಂದೆ ಮಗನ ಪಾರ್ಟ್ ನೋಡಿ ಪಕ್ಕದಲ್ಲಿ ಕುಳಿತಿದ್ದ ಹೆಂಡತಿಯತ್ತ ತಿರುಗಿ 'ಲೇ... ನಾ ಭೀಮನ ಪಾತ್ರವ ಎಂಗ್ ಮಾಡ್ತಿದ್ದೆ, ಆ ಮಟ್ಟೇನು, ಆ ಗತ್ತೇನು, ಅಂಗೆ ದ್ರೌಪತಿಯ ಎತ್ಕೊಂಡು ತಿರಿಗ್ಸ ಬಿಡ್ತಿದ್ದೆ. ಇವ್ನುಅವ್ನೆ ಸರಿಯಾಗಿ ಕುಣಿಯಲ್ಲ, ನೆಟ್ಟಗ್ ಮುಟ್ಟಲ್ಲ' ಎಂದಾಗ ಮುಖ ಗಂಟಾ–ಕ್ಕೊಂಡು ಗಂಡನ ಕಡೆ ತಿರುಗಿ 'ಹ್ಞೂಂ ಕಣಪ್ಪ ಅವಳ್ನ ಇಟ್ಕೊಂಡು ಬಾಳ ಚಂದಾಗ್ ಕುಣಿತಿದ್ದೆ ನೀನು. ಅದ್ಕೆ ಅಲ್ವಾ ಎರಡು ಎಕರೆ ಜಮೀನ್ ಮಾರ್ಸಿದ್ಲು, ನಾಟ್ಕ ನೋಡು ಮುದೇವಿ.' ಹೆಂಡತಿಯ ಈ ಮಾತು ಕೇಳಿ ಪೆಚ್ಚಾದ ಗಂಡ ಯಾಪ್ ಮೊರೆ ಹಾಕೊಂಡು ನಾಟಕದ ಕಡೆ ಮುಖ ಮಾಡಿದ.





ಭೀಮನ ಪಾತ್ರಧಾರಿ ಮಾದ ದ್ರೌಪದಿಯೊಂದಿಗೆ ಡುಯಟ್ ಹಾಡುತ್ತಿರುವನು. ಪ್ರೇಕ್ಷಕರು ಚಪ್ಪಾಳೆ ಹೊಡೆಯುತ್ತಾ ಪ್ರೋತ್ಸಾಹಿಸುತ್ತಿದ್ದರು. ಆ ಜನರ ಮಧ್ಯೆ ಕುಳಿತಿದ್ದ ಮಾದನತಂದೆ ಮಗನ ಪಾರ್ಟ್ ನೋಡಿ ಪಕ್ಕದಲ್ಲಿ ಕುಳಿತ್ತಿದ್ದ ಹೆಂಡತಿಯತ್ತತಿರುಗಿ 'ಲೇ... ನಾ ಭೀಮನ ಪಾತ್ರವಎಂಗ್ ಮಾಡ್ತಿದ್ದೆ, ಆ ಮಟ್ಟೇನು, ಆ ಗತ್ತೇನು, ಅಂಗೆ ದ್ರೌಪತಿಯಎತ್ಕೊಂಡುತಿರಿಗ್ಸ ಬಿಡ್ತಿದ್ದೆ. ಇವ್ನುಅವ್ನೆ ಸರಿಯಾಗಿಕುಣಿಯಲ್ಲ, ನೆಟ್ಟಗ್ ಮುಟ್ಟಲ್ಲ' ಎಂದಾಗ ಮುಖ ಗಂಟಾಕ್ಕೊಂಡುಗಂಡನಕಡೆತಿರುಗಿ 'ಹ್ಞೂಂ ಕಣಪ್ಪ ಅವಳ್ನ ಇಟ್ಕೊಂಡು ಬಾಳ ಚಂದಾಗ್ ಕುಣಿತಿದ್ದೆ ನೀನು. ಅದ್ಕೆ ಅಲ್ವಾ ಎರಡು ಎಕರೆ ಜಮೀನ್ ಮಾರ್ಸಿದ್ಲು, ನಾಟ್ಕ ನೋಡು ಮುದೇವಿ.' ಹೆಂಡತಿಯ ಈ ಮಾತು ಕೇಳಿ ಪೆಚ್ಚಾದಗಂಡ ಯಾಪ್‌ಮೊರೆ ಹಾಕೊಂಡು ನಾಟಕದ ಕಡೆ ಮುಖ ಮಾಡಿದ.



ಈ ಮಧ್ಯೆ ವೇದಿಕೆಯ ಕಾರ್ಯಕ್ರಮದಲ್ಲಿ ಊರಿನ ಮುಖಂಡರು, ರಾಜಕೀಯ ವ್ಯಕ್ತಿಗಳಿಂದ ಭಾಷಣ. ಆ ಭಾಷಣ ಕೇಳಲಾಗದೆ ಮಧ್ಯೆ ಮಧ್ಯೆ ಚಪ್ಪಾಳೆ ಹಾಕುತ್ತಿದ್ದ ಯುವ ಪಡೆ. ಭಾಷಣ ಮಾಡಲು ಆಗದೇ, ಭಾಷಣ ನಿಲ್ಲಿಸಲು ಆಗದೇ ಪರಿತಪಿಸುತ್ತಿದ್ದ ಅತಿಥಿಗಳು. ಅಂತು ಜನರ ಒತ್ತಾಯದ ಮೇರೆಗೆ ವೇದಿಕೆ ಕಾರ್ಯಕ್ರಮ ಮೊಟಕು ಮಾಡಲಾಯಿತು. ನಂತರ ಪಾತ್ರಧಾರಿಗಳಿಗೆ ಮುಯ್ಯಿ ಮಾಡುವ ಸಮಯ. ಸಂಬಂಧಿಕರು, ಸ್ನೇಹಿತರು ತಮ್ಮ ತಮ್ಮ ಕಲಾವಿದರಿಗೆ ಹಣದ ಉಡುಗೊರೆ, ಪಾತ್ರೆ ಪಗಡೆ ಉಡುಗೊರೆ, ಹಾರ ತುರಾಯಿ ಹಾಕುವುದು ನಡೆದಿತ್ತು. ಇದಕ್ಕಾಗಿ ನಾ ಮುಂದು, ತಾ ಮುಂದು ಎಂದು ಸ್ಪರ್ಧೆಯೂ ಇತ್ತು. ಯಾರಿಗೋ ಹಾಕಿದ ಭಾರಿ ಗಾತ್ರದ ಹೂವಿನ ಹಾರವನ್ನು ಇನ್ಯಾರೋ ಕದ್ಕಂಡು ಬಂದು ಹಾಕುವುದು ನಡೆದಿತ್ತು.

ಇವರ ಬೆಳಗಾನ ಆಡೋ ಪೌರಾಣಿಕ ನಾಟಕವನ್ನ ನೋಡ್ತಾ ನೋಡ್ತಾ ಹಂಗೆ ಮಲಗಿದ್ದವರು ಅದೆಷ್ಟೋ ಜನ, ಕುಳಿತು ತೂಕಡಿಸುತ್ತಲೇ ಇದ್ದವರು ಅದೆಷ್ಟೋ ಜನ. ಇನ್ನು ತಮ್ಮ ಮನೆಯವರೊ, ತಮ್ಮ ಸಂಬಂಧಿಕರೋ, ಸ್ಟೇಜ್ ಮೇಲೆ ಬರಲಿ ಅಂತ ಕಾಯ್ದುಕೊಂಡು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಕುಳಿತೇ ಇದ್ದವರು ಅದೆಷ್ಟೋ ಜನರು. ಇನ್ನು ಹೊಟ್ಟೆಗೆ ಎಣ್ಣೆ ಬಿಟ್ಟುಕೊಂಡವರು ಅಲ್ಲಲ್ಲಿಯೇ ಮಲಗಿ ಗೊರಕೆಯೊಡೆಯುತ್ತಿದ್ದರು. ಇದ್ಯಾವುದೇ ಪರಿವಿಲ್ಲದೆ ನಾಟಕದ ವಾದ್ಯಗಾರರು ಸುಮಧುರವಾಗಿ ಸಂಗೀತ ನುಡಿಸುತ್ತಿದ್ದರು, ಕಲಾವಿದರು ತಮ್ಮ ಅಭಿನಯ ಪ್ರದರ್ಶಿಸುತ್ತಿದ್ದರು.

ಮುಂಜಾನೆ ನಾಟಕ ಮುಕ್ತಾಯಗೊಂಡು ಡ್ರಾಮ ಸೀನರಿಯರು ಸ್ಟೇಜ್ ಬಿಚ್ಚಲು ಮುಂದಾಗಿದ್ದರು. ಕಲಾವಿದರು ಅವರವರ ಮನೆಯತ್ತ ಹೊರಟರು. ಅಲ್ಲಿ ನೆರೆದಿದ್ದ ಜನರೆಲ್ಲಾ ಮನೆಯತ್ತ ಹೆಜ್ಜೆ ಹಾಕಿದರು. ಕೆಲವರು ಮಲಗಿದ್ದವರನ್ನು ಮೇಲೇಳಿಸುತ್ತಿದ್ದರು. ಕೆಲವರು ಮಲಗಿದ್ದ ತಮ್ಮ ಮಕ್ಕಳನ್ನು ಎತ್ತುಕೊಂಡು ಹೊರಟರು.

ನಾಟಕ ಮುಗಿಸಿ ಮನೆಗೆ ಬಂದ ಮಾದನಿಗೆ ಬಾಗಿಲ ಬಳಿ ಅವರ ತಾಯಿ ಆರತಿ ತೆಗೆದು ಒಳಗೆ ಬರಮಾಡಿಕೊಂಡರು. ಇತ್ತ ಅಪ್ಪ ಮಗನನ್ನು ನೋಡಿ ಒಂದು ಹುಸಿ ನಗೆ ಬೀರಿ ಜೇಬಿನಿಂದ ಬೀಡಿ ತೆಗೆದು ಹಚ್ಚಿಕೊಂಡ. ಮಾದ ಒಳಗೋದ. ತಾಯಿ ಆರತಿ ಮಾಡಿದ ನೀರನ್ನು ಮನೆ ಮುಂದೆ ಸುರಿದು ಒಮ್ಮೆ ಬೀಡಿ ಎಳೆಯುತ್ತಿದ್ದ ಗಂಡನತ್ತ ನೋಡಿ, ಹಿಡಿದಿದ್ದ ತಟ್ಟೆಯನ್ನು ಅಲ್ಲಿನ ಜಗಲಿಯ ಕಂಬಕ್ಕೆ ಬಡಿದು ಒಳಗೆ ಹೋದಳು. ಹೆಂಡತಿಯ ದರ್ಪ ನೋಡಿದ ಗಂಡ ಜಗುಲಿಯ ಮೇಲೆ ಮುದುರಿಕೊಂಡು ಮಲಗಿದ.

**ಅವಸಾನದತ್ತ ಪೌರಾಣಿಕ ನಾಟಕಗಳು**

ಪೌರಾಣಿಕ ನಾಟಕಗಳನ್ನು ಅಭಿನಯಿಸಲು ಮತ್ತು ನೋಡಲು ಗ್ರಾಮೀಣ ಭಾಗಗಳಲ್ಲಿ ಹೆಚ್ಚಿನ ಆಸಕ್ತಿಯಿತ್ತು. ಆಗಿನ ಕಾಲಕ್ಕೆ ಮನರಂಜನೆಗೆ ಇದ್ದದ್ದೇ ಪೌರಾಣಿಕ ನಾಟಕಗಳು. ಮಹಾಭಾರತ ಮತ್ತು ರಾಮಾಯಣ ಕುರಿತಾಗಿ ಕುರುಕ್ಷೇತ್ರ, ದಕ್ಷಯಜ್ಞ, ಕೃಷ್ಣಲೀಲೆ, ಭಕ್ತಪ್ರಹ್ಲಾದ, ಐಹಿರಾವಣ ಮಹಿರಾವಣ, ಶ್ರೀ ಕೃಷ್ಣಗಾರುಡಿ, ರಾಜಸುಯಾಗ ಮುಂತಾದ ನಾಟಕಗಳನ್ನು ಅಭಿನಯಿಸುತ್ತಿದ್ದರು.

ಪೌರಾಣಿಕ ನಾಟಕಗಳ ನಂತರ ಸಾಮಾಜಿಕ ನಾಟಕಗಳು ಆ ಜಾಗವನ್ನು ಆಕ್ರಮಿಸತೊಡಗಿತು. ಅಲ್ಲದೆ ಕಾಲಕ್ರಮೇಣ ದೂರದರ್ಶನ ಮತ್ತು ಮೊಬೈಲ್ ಬಂದ ಮೇಲಂತೂ ಪೌರಾಣಿಕ ನಾಟಕಗಳ ಗತವೈಭವ ಕ್ಷೀಣಿಸತೊಡಗಿವೆ. ಧಾರ್ಮಿಕ, ನೈತಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಬಿಂಬಿಸುತ್ತಿದ್ದ ಈ ನಾಟಕಗಳು ಮನರಂಜನೆಯ ಜೊತೆಗೆ ಜೀವನದ ಮೌಲ್ಯಗಳನ್ನು ಮತ್ತು ಸಾಮಾಜಿಕ ಬದ್ಧತೆಗಳನ್ನು ಸಮಾಜಕ್ಕೆ ತಿಳಿಸುವಲ್ಲಿ ಸಹಕಾರಿಯಾಗಿದ್ದವು. ಇಂತಹ ಪೌರಾಣಿಕ ನಾಟಕಗಳ ಕಲೆಗೆ ಸರ್ಕಾರ ಹೆಚ್ಚಿನ ಉತ್ತೇಜನ ನೀಡಬೇಕು, ಪೌರಾಣಿಕ ನಾಟಕಗಳನ್ನು ಕಲಾವಿದರನ್ನು ಪೋಷಿಸುವ ಕೆಲಸವನ್ನು ಮಾಡುವ ಮೂಲಕ ಮುಂದಿನ ಪೀಳಿಗೆಗೆ ಇಂತಹ ಭವ್ಯವಾದ ನಮ್ಮ ಭಾರತೀಯ ಪಾರಂಪರಿಕ ಕಲೆಯನ್ನು ಉಳಿಸಿ, ಬೆಳೆಸಬೇಕಿದೆ. ■

# ಮಿನಿ ದಸರಾ ಮಾದರಿ ಅದ್ದೂರಿ ಕನ್ನಡ ರಾಜ್ಯೋತ್ಸವ ಮೆರವಣಿಗೆ

**ಹುಣಸೂರು:** ನಗರದಲ್ಲಿ ಮಿನಿ ದಸರಾ ನೆನಪಿಸುವಂತೆ ಕನ್ನಡಾಂಬೆ ತಾಯಿ ಭುವನೇಶ್ವರಿಯ ಅದ್ದೂರಿ ಮೆರವಣಿಗೆ ಸಾರ್ವಜನಿಕರ ಗಮನ ಸೆಳೆಯಿತು.

ಶಾಸಕ ಜಿ.ಡಿ.ಹರೀಶ್‌ಗೌಡ, ತಹಸೀಲ್ದಾರ್ ಜೆ.ಮಂಜುನಾಥ್, ಪೌರಾಯುಕ್ತೆ ಎಂ.ಮಾನಸ, ತಾ.ಪಂ.ಇಒ ಹೊಂಗಯ್ಯ, ಬಿಇಒ ಮಹದೇವ್ ತಾಲೂಕು ಕಸಾಪ ಅಧ್ಯಕ್ಷ ಹರವೆಮಹದೇವ್ ಸೇರಿದಂತೆ ಗಣ್ಯರು ನಂದಿ ಕಂಬಕ್ಕೆ ಪೂಜೆ ಸಲ್ಲಿಸಿ, ತಾಯಿ ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ಗೈದು ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆಗೆ ಚಾಲನೆ ನೀಡಿದ ಹಲವಾರು ಸಾಹಿತಿಗಳು, ಹೋರಾಟಗಾರರು, ಮುಖ್ಯವಾಗಿ ಹುಣಸೂರಿನವರೇ ಆದ ದಿ.ದೇವರಾಜಅರಸರ ದಿಟ್ಟ ನಿರ್ಧಾರದಿಂದಾಗಿ ಕರ್ನಾಟಕದ ಉದಯವಾಯಿತೆಂದು ಸ್ಮರಿಸಿ, ತಾಲೂಕಿನಲ್ಲಿ ಚದುರಂಗ, ಹುಣಸೂರು ಕೃಷ್ಣಮೂರ್ತಿ, ದ್ವಾರಕೀಶ್, ಯೋಗೀಶ್‌ರಂತಹ ಅತಿರಥ ಮಹಾರಥರು ಜನಿಸಿದ ಪುಣ್ಯ ಭೂಮಿ ಇದು ಎಂದು ನೆನೆದರು.

**ಕಳೆಗಟ್ಟಿದ ಸ್ತಬ್ಧ ಚಿತ್ರಗಳು:** ನಗರದ ಕಲ್ಕುಣಿಕೆ ರಂಗನಾಥ ಬಡಾವಣೆಯಿಂದ ಕನ್ನಡಮ್ಮ ಭುನವೇಶ್ವರಿದೇವಿಯ ವಿಗ್ರಹ ಹೊತ್ತ ರಥದ ಭವ್ಯ ಮೆರವಣಿಗೆಗೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಿದರು. ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ವೀರಗಾಸೆ, ಗೊರವರ ಕುಣಿತ, ಮಂಗಳವಾದ್ಯ, ವಿವಿಧ ಶಾಲಾ ಕಾಲೇಜುಗಳ ಬ್ಯಾಂಡ್‌ಸೆಟ್ ವಾದನ, ತೆ–ೋಟಗಾರಿಕೆ, ಗ್ಯಾರಂಟಿ ಯೋಜನೆಗಳು, ಸಮಾಜ ಕಲ್ಯಾಣ ಇಲಾಖೆಯ ಸವಲತ್ತುಗಳು, ಅರಣ್ಯ ಇಲಾಖೆಯ ವನ್ಯಜೀವಿ, ಅರಣ್ಯ ಸಂರಕ್ಷಣೆ ಮಹತ್ವ ಸಾರುವ ಸ್ತಬ್ಧ ಚಿತ್ರ ಸೇರಿದಂತೆ ವಿವಿಧ ಇಲಾಖೆಗಳ ಸವಲತ್ತುಗಳ ಸಮಗ್ರ ಮಾಹಿತಿಯುಳ್ಳ ಸ್ತಬ್ಧ ಚಿತ್ರಗಳು ಸಾಗಿಬಂದವು.

ಶಾಲಾ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಪಥಸಂಚಲನ ನಡೆಸಿದರು. ಮೆರವಣಿಗೆ ಸೇತುವೆ ರಸ್ತೆ ಮೂಲಕ ಸಂವಿಧಾನ ವೃತ್ತ, ಕಲ್ಪತರು ವೃತ್ತ, ಬಜಾರ್ ರಸ್ತೆ, ಜೆಎಲ್‌ಬಿ ರಸ್ತೆ, ಎಸ್‌ಜೆ ರಸ್ತೆಗಳನ್ನು ಹಾದು ಮುನೇಶ್ವರ ಕಾವಲ್ ಮೈದಾನದಲ್ಲಿ ಸಂಪನ್ನಗೊಂಡಿತು.



ಹುಣಸೂರು ನಗರದ ಕಲ್ಕುಣಿಕೆ ರಂಗನಾಥ ಬಡಾವಣೆಯಲ್ಲಿ ರಾಜ್ಯೋತ್ಸವ ಮೆರವಣಿಗೆಗೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಿದರು.

ಆಟೋ ಚಾಲಕರ ಸಂಘ, ಕಾರುಚಾಲಕರ ಸಂಘದ ಸದಸ್ಯರು ತಮ್ಮ ನಿಲ್ದಾಣಗಳನ್ನು ದೀಪಾಲಂಕಾರಗಳಿಂದ ಸಿಂಗರಿಸಿ ಅನ್ನಸಂತರ್ಪಣೆ ನಡೆಸಿ ಸಂಭ್ರಮಿಸಿದರು. ತಹಸೀಲ್ದಾರ್ ಜೆ.ಮಂಜುನಾಥ್, ಶಿರಸ್ತೇದಾರ್ ಶ್ರೀಪಾದ್ ನಲವತ್ವಾಡಕರ್, ಬಿಇಒ ಎಸ್.ಪಿ.ಮಹದೇವ್, ವಿ.ಎನ್.ದಾಸ್, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಸದಸ್ಯರಾದ ಎಸ್.ಜಯರಾಂ, ಪಿ.ಆರ್.ರಾಚಪ್ಪ, ಸುಬ್ಬರಾವ್, ಕಸಾಪ ತಾಲೂಕು ಘಟಕದ ಅಧ್ಯಕ್ಷ ಎಚ್.ಮಹದೇವ, ಟಿ.ಲೋಕೇಶ್, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ರಮೇಶ್ ಹಾಜರಿದ್ದರು.

# ಎಐ ಸವಾಲಿಗೆ ಕನ್ನಡ ಸಜ್ಜುಗೊಳಿಸಲು ಬದ್ಧ

## 70ನೇ ಕನ್ನಡ ರಾಜ್ಯೋತ್ಸವದಲ್ಲಿ ನಾಡನ್ನು ಉದ್ದೇಶಿಸಿ ಮಾತನಾಡಿದ ಸಿಎಂ ಸಿದ್ದರಾಮಯ್ಯ

**ಬೆಂಗಳೂರು:** ಎಲ್ಲೆಡೆ ವೇಗವಾಗಿ ಆವರಿಸಿಕೊಳ್ಳುತ್ತಿರುವ ಎಐನಿಂದ ನಮ್ಮ ನೆಲದಲ್ಲಿ ಉದ್ಯೋಗ ನಷ್ಟವಾಗದಂತೆ ನಮ್ಮ ಭಾಷೆಯನ್ನು ಹೊಸ ಸವಾಲಿಗೆ ಬೇಕಾದ ಹಾಗೆ ಸಿದ್ಧಪಡಿಸಲು ಸರಕಾರ ಬದ್ಧವಾಗಿದೆ. ಕನ್ನಡವನ್ನು ಹೊಸ ತಂತ್ರಜ್ಞಾನದ ಭಾಷೆಯನ್ನಾಗಿಸಲು ವಿದ್ವಾಂಸರು, ತಾಂತ್ರಿಕ ತಜ್ಞರು ಮುಂದಾಗಬೇಕು ಎಂದು ಸಿಎಂ ಸಿದ್ದರಾಮಯ್ಯ ಕರೆ ನೀಡಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ಆಯೋಜನೆ ಮಾಡಿದ್ದ 70ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಮಾಹಿತಿ ತಂತ್ರಜ್ಞಾನ ಯುಗ ಈಗ ಆರ್ಟಿಫಿಷಿಯಲ್ ತಂತ್ರಜ್ಞಾನದ ಯುಗವಾಗಿ ಬದಲಾಗುತ್ತಿದೆ. ಇದರಿಂದ ಉದ್ಯೋಗ ನಷ್ಟವಾಗಬಹುದು ಎಂಬ ಆತಂಕವೂ ಎದುರಾಗಿದೆ. ಕನ್ನಡ ಭಾಷೆ, ಪರಂಪರೆ ಮತ್ತು ಸಂಸ್ಕೃತಿಯನ್ನು ಜಾಗತಿಕ ಮಟ್ಟಕ್ಕೆ ಎತ್ತರಿಸುವ ಕಾರ್ಯವನ್ನು ನಮ್ಮ ಸರಕಾರ ಮಾಡುತ್ತಿದೆ ಎಂದರು ಕನ್ನಡ ಶಾಲೆಗಳ ಅಭಿವೃದ್ಧಿ, ಮದರಸಾಗಳಲ್ಲಿ ಕನ್ನಡ ಕಲಿಕೆ 800 ಕನ್ನಡ ಶಾಲೆಗಳು ಮತ್ತು 100 ಉರ್ದು ಶಾಲೆಗಳನ್ನು ಕೆಪಿಎಸ್ ಶಾಲೆಗಳನ್ನಾಗಿ ಅಭಿವೃದ್ಧಿ ಮಾಡಲಾಗುತ್ತಿದೆ. ಮದರಸಾಗಳಲ್ಲಿ ಕನ್ನಡ ಕಲಿಸಲು ಆದ್ಯತೆ ನೀಡುತ್ತಿದ್ದೇವೆ. ಕನ್ನಡ ಭಾಷೆ, ಪರಂಪರೆಗಳನ್ನು ಜಾಗತಿಕ ಮಟ್ಟಕ್ಕೆ ಎತ್ತರಿಸಬೇಕಾದ ಅನಿವಾರ್ಯತೆ ಇರುವುದರಿಂದ ಇದಕ್ಕಾಗಿ ಹೊಸ ನೀತಿಯನ್ನು ತರುವ ಸಿದ್ಧತೆಯಲ್ಲಿದ್ದೇವೆ. ರಾಜ್ಯಾದ್ಯಂತ 2,500 ಕೋಟಿ. ರೂ. ವೆಚ್ಚದಲ್ಲಿ 800 ಸರಕಾರಿ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಪರಿವರ್ತಿಸಿ ಪ್ರತಿ ಶಾಲೆಗೆ 4 ಕೋಟಿ ರೂ. ವಿಶೇಷ ಅನುದಾನ ನೀಡಲಾಗುವುದು ಎಂದು ತಿಳಿಸಿದರು.

ಬಹು ಭಾಷೆ, ಬಹು ಧರ್ಮ, ಬಹು ಸಂಸ್ಕೃತಿ ಹಾಗೂ ಬಹು ಜನಾಂಗಗಳು ಒಟ್ಟುಗೂಡಿ ಬದುಕುವ ತತ್ವಗಳನ್ನು ನಮ್ಮ ಹಿರಿಯರು ಕಂಡುಕೊಂಡಿದ್ದು, ಹಿಂದಿನಿಂದಲೂ ಎಲ್ಲರೂ ಒಟ್ಟಾಗಿ ಬಾಳಿ ಬದುಕಿ ನಾಡನ್ನು ಕಟ್ಟಿ ನಿಲ್ಲಿಸಿ ಸಮೃದ್ಧಗೊಳಿಸಿದ್ದಾರೆ. ನಾಡನ್ನು ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿಸಲು ಪ್ರಯತ್ನಿಸಿದ್ದಾರೆ. ಒಂದು ನಾಡನ್ನು ಕಟ್ಟುವುದು ಸರಳವಾದ ಸಂಗತಿಯಲ್ಲ. ನಾಡೊಂದರ ಸಮಗ್ರ ಅಭಿವೃದ್ಧಿಯೆಂದರೆ ರಸ್ತೆ, ಸೇತುವೆ, ವಿದ್ಯುತ್, ರೈಲು, ವಿಮಾನ, ಸುಸಜ್ಜಿತ ಕಟ್ಟಡಗಳಷ್ಟೆ ಅಲ್ಲ. ಆ ನಾಡಿನ ಮಕ್ಕಳ ಮಾನಸಿಕ, ದೈಹಿಕ ಆರೋಗ್ಯ, ತಮ್ಮ ಜೊತೆಯಲ್ಲಿನ ಮಕ್ಕಳ ಭಾಷೆ, ಬದುಕು, ಧರ್ಮ, ಜಾತಿ ಹಾಗೂ ಇನ್ನಿತ್ಯಾದಿ ಭಿನ್ನತೆಗಳನ್ನು ಸಹನೆಯಿಂದ ನೋಡುವುದನ್ನು ಕಲಿಸುವುದೂ ಮುಖ್ಯ. ಇದರ ಜೊತೆಗೆ ಜಗತ್ತಿನ ಮುಖ್ಯ ದೇಶಗಳಲ್ಲಿ ನಡೆಯುತ್ತಿರುವ ವಿವಿಧ ರೀತಿಯ ಅನ್ವೇಷಣೆಗಳಿಗೆ ಸರಿಸಾಟಿಯಾಗಿ ನಿಲ್ಲುವಂತ ರೀತಿಯಲ್ಲಿ ಆಲೋಚನೆಗಳನ್ನು ಕಲಿಸುವ ವಾತಾವರಣವೂ ಬಹಳ ಮುಖ್ಯ ಎಂದು ತಿಳಿಸಿದರು.



ಬೆಂಗಳೂರಿನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ಆಯೋಜನೆ ಮಾಡಿದ್ದ 70ನೇ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟನೆ ಮಾಡಿದರು.

ಒಕ್ಕೂಟ ಸರ್ಕಾರದಿಂದ ಮಲತಾಯಿ ಧೋರಣೆ ಒಕ್ಕೂಟ ಸರ್ಕಾರವು ಕಳೆದ ಕೆಲವು ವರ್ಷಗಳಿಂದ ಮಲತಾಯಿ ಧೋರಣೆಯನ್ನು ತೋರುತ್ತಿದೆ. 4.5 ಲಕ್ಷ ಕೋಟಿ ರೂ.ಗಳಿಗಿಂತ ಹೆಚ್ಚಿನ ತೆರಿಗೆ ಸಂಪತ್ತನ್ನು ಕರ್ನಾಟಕವು ನೀಡುತ್ತಿದೆ. ಆದರೆ ನಮಗೆ ಬಿಡಿಗಾಸು ಕೊಟ್ಟು ಪ್ರತಿ ವರ್ಷ ಸಾವಿರಾರು ಕೋಟಿ ರೂಪಾಯಿಗಳನ್ನು ವಂಚಿಸುತ್ತಿದೆ. ಹಿಂದಿ ಭಾಷೆಯನ್ನು ಹೇರಿಕೆ ಮಾಡಲು ನಿರಂತರ ಹುನ್ನಾರ ನಡೆಯುತ್ತಿದೆ. ಹಿಂದಿ, ಸಂಸ್ಕೃತ ಭಾಷೆಗಳ ಅಭಿವೃದ್ಧಿಗೆ ಮಾತ್ರ ಅನುದಾನಗಳನ್ನು ನೀಡಲಾಗುತ್ತಿದೆ. ಕನ್ನಡವೂ ಸೇರಿದಂತೆ ಉಳಿದ ದೇಶಭಾಷೆಗಳನ್ನು ನಿರ್ಲಕ್ಷಿಸಲಾಗುತ್ತಿದೆ ಎಂದು ಆರೋಪಿಸಿದರು.

**ಶಿಕ್ಷಕರ ನೇಮಕಕ್ಕೆ ಅಗತ್ಯ ಕ್ರಮ**

ಕಾಲಕಾಲಕ್ಕೆ ಶಿಕ್ಷಕರ ನೇಮಕಾತಿ ಮತ್ತು ತರಬೇತಿಗಳನ್ನು ನಡೆಸಲಾಗುತ್ತಿದೆ. 2024ರಲ್ಲಿ 14,499 ಪದವಿ ಪ್ರಾಥಮಿಕ ಶಿಕ್ಷಕರ ನೇಮಕಾತಿ ಮಾಡಲಾಗಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ 5,267 ಮತ್ತು ಇತರೆ ಪ್ರದೇಶಗಳಲ್ಲಿ 5,000 ಶಿಕ್ಷಕರ ನೇಮಕಾತಿ ಮಾಡಲಾಗುತ್ತಿದೆ. 800 ಹೊಸ ಪಿಯು ಉಪನ್ಯಾಸಕರ ನೇಮಕಾತಿ ಮಾಡಲಾಗಿದೆ.

ಹೊಸದಾಗಿ 18,000ಕ್ಕೂ ಹೆಚ್ಚು ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗುತ್ತಿದೆ. ಅನುದಾನಿತ ಶಾಲೆಗಳಿಗೆ 5,000 ಶಿಕ್ಷಕರ ಹುದ್ದೆಗಳನ್ನು ನೇಮಕ ಮಾಡಲು ಅನುಮತಿ ನೀಡಲಾಗಿದೆ. ಇತ್ತೀಚೆಗೆ ತಾನೆ ಪ್ರೊ.ಸುಖ್‌ದೇವ್ ಥೋರಟ್ ಅವರ ಅಧ್ಯಕ್ಷತೆಯಲ್ಲಿ ರಚನೆಯಾಗಿದ್ದ ರಾಜ್ಯ ಶಿಕ್ಷಣ ನೀತಿ ಆಯೋಗವು ತನ್ನ ವರದಿಯನ್ನು ನೀಡಿದೆ.

ರಾಜ್ಯದ್ದೆ ಆದ ಶಿಕ್ಷಣ ನೀತಿಯು ರಚನೆಯಾಗಿರುವುದು ಇದೇ ಮೊದಲು. ಸದರಿ ವರದಿಯನ್ನು ಗಂಭೀರವಾಗಿ ಪರಿಶೀಲಿಸಿ ಅದರ ಅನುಷ್ಠಾನಕ್ಕೆ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದರು. ನಮ್ಮ ಹಿರಿಯರು ಬಹಳ ತ್ಯಾಗ ಮಾಡಿ ಈ ನಾಡನ್ನು ಕಟ್ಟಿದ್ದಾರೆ. ನಮ್ಮ ಗುರಿ ಅತ್ಯಂತ ಉದಾತ್ತವಾದ, ವೈಜ್ಞಾನಿಕವಾದ, ವೈಚಾರಿಕ ಮನೋಭಾವದ, ಮಾನವೀಯತೆಯ ನಾಡನ್ನು ಕಟ್ಟುವುದು. ಯುರೋಪಿನ ಸ್ಕ್ಯಾಂಡಿನೇವಿಯನ್ ದೇಶಗಳು ಈ ವಿಚಾರದಲ್ಲಿ ಬಹಳಷ್ಟನ್ನು ಸಾಧಿಸಿವೆ ಎಂದರು.

## ಯಾರನ್ನೂ ನಾನು ಪ್ರಶಸ್ತಿಗೆ ಶಿಫಾರಸ್ಸು ಮಾಡಿಲ್ಲ: ಸಿಎಂ ಸಿದ್ದರಾಮಯ್ಯ

**ಬೆಂಗಳೂರು:** ರಾಜ್ಯದ ಮುಖ್ಯಮಂತ್ರಿಯಾಗಿ ಯಾರ ಹೆಸರನ್ನೂ ನಾನು ಪ್ರಶಸ್ತಿಗೆ ಶಿಫಾರಸ್ಸು ಮಾಡಿಲ್ಲ. ಆಯ್ಕೆ ಸಮಿತಿ ತೀರ್ಮಾನವೇ ಅಂತಿಮವಾಗಿ ಆಯ್ಕೆ ನಡೆದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ "70ನೇ ಕರ್ನಾಟಕ ರಾಜ್ಯೋತ್ಸವವನ್ನು ಉದ್ಘಾಟಿಸಿ 70 ಮಂದಿ ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿ ಮಾತನಾಡಿದರು. ಕರ್ನಾಟಕ ಉದಯವಾಗಿ 70 ವರ್ಷಗಳಾಗಿರುವುದನ್ನು ಪರಿಗಣಿಸಿ 70 ಮಂದಿ ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದರು. ಅರ್ಜಿ ಹಾಕಿದವರನ್ನು ಪರಿಗಣಿಸದೇ ಆಯಾ ಕ್ಷೇತ್ರದ ಪರಿಣಿತರನ್ನೇ ಗುರುತಿಸಿ ಆಯ್ಕೆ ಮಾಡಬೇಕು ಎನ್ನುವುದು ನಮ್ಮ ತೀರ್ಮಾನವಾಗಿತ್ತು. ಪುರಸ್ಕೃತರೆಲ್ಲರೂ ಶತಾಯುಶಿಗಳಾಗಿ ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಇನ್ನಷ್ಟು ಸಾಧನೆ ಮಾಡಿ ನಿಮ್ಮದೆಲ್ಲಾ ಸಾರ್ಥಕ ಬದುಕು ಆಗಲಿ ಎಂದು ಹಾರೈಸಿದರು.

ಒಂದೇ ವಿಭಾಗದಲ್ಲಿ ಒಬ್ಬರಿಗಿಂತ ಹೆಚ್ಚು ಸಾಧಕರ ಹೆಸರು ಇದ್ದ ಸಂದರ್ಭದಲ್ಲಿ ಮಾತ್ರ ಪ್ರಾದೇಶಿಕ ನ್ಯಾಯ, ಸಾಮಾಜಿಕ ನ್ಯಾಯದ ಕಾರಣಕ್ಕಾಗಿ ಆ ಅರ್ಹರಲ್ಲೇ ಒಬ್ಬರ ಹೆಸರನ್ನು ಅಂತಿಮಗೊಳಿಸಲಾಗಿದೆ ಎಂದರು.

ಮಾಧ್ಯಮಗಳು ಯಾರ ಆಯ್ಕೆ ಬಗ್ಗೆಯೂ ತಕರಾರು ಮಾಡಿಲ್ಲ. ಆದ್ದರಿಂದ ಅರ್ಹರಿಗೇ ಪ್ರಶಸ್ತಿ ಸಿಕ್ಕಿದೆ ಎಂದು ಭಾವಿಸುತ್ತೇನೆ ಎಂದು ಮೆಚ್ಚುಗೆ ಸೂಚಿಸಿದರು.

ಪ್ರಶಸ್ತಿ ಪುರಸ್ಕೃತರಾದ ಕೋಣಂದೂರು ಲಿಂಗಪ್ಪ ಅವರನ್ನು ಉಲ್ಲೇಖಿಸಿ ಸಮಾಜವಾದಿ ಹೋರಾಟದ ದಿನಗಳನ್ನು ಸ್ಮರಿಸಿದರು. ಈ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಅಧಿಕಾರಿಗಳು, ವಿವಿಧ ಕ್ಷೇತ್ರಗಳ ಗಣ್ಯರು ಭಾಗಿಯಾಗಿದ್ದರು.



## ಅರಮನೆ ಆವರಣದಲ್ಲಿ ಭುವನೇಶ್ವರಿಗೆ ನಮನ



ಕನ್ನಡ ರಾಜ್ಯೋತ್ಸವದ ಅಂಗವಾಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಅವರು ಅರಮನೆ ಆವರಣದಲ್ಲಿರುವ ಶ್ರೀ ಭುವನೇಶ್ವರಿ ದೇವಾಲಯಕ್ಕೆ ಭೇಟಿ ನೀಡಿ ಪುಷ್ಪಾರ್ಚನೆಯನ್ನು ಸಲ್ಲಿಸಿದರು.

**ಮೈಸೂರು:** ಕನ್ನಡ ರಾಜ್ಯೋತ್ಸವದ ಅಂಗವಾಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಅವರು ಅರಮನೆ ಆವರಣದಲ್ಲಿರುವ ಶ್ರೀ ಭುವನೇಶ್ವರಿ ದೇವಾಲಯಕ್ಕೆ ಭೇಟಿ ನೀಡಿ ಪುಷ್ಪಾರ್ಚನೆಯನ್ನು ಸಲ್ಲಿಸಿದರು. ಬಳಿಕ ಭುವನೇಶ್ವರಿ ತಾಯಿಯ ಮೆರವಣಿಗೆ ರಥಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಸಿಇಒ ಎಸ್.ಯುಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಅಪರ ಜಿಲ್ಲಾಧಿಕಾರಿ ಡಾ: ಪಿ ಶಿವರಾಜು, ಡಿಸಿಪಿಗಳಾದ ಸುಂದರ್ ರಾಜು, ಬಿಂದುಮಣಿ ಅವರು ಸೇರಿದಂತೆ ಮುಂತಾದವರು ಹಾಜರಿದ್ದರು.

## 'ವಾಟಾಳ್ ರಾಜಿ ಮಾಡಿಕೊಳ್ಳದ ಹೋರಾಟಗಾರ'

**ಬೆಂಗಳೂರು:** ವಾಟಾಳ್ ಕನ್ನಡದ ವಿಚಾರದಲ್ಲಿ ರಾಜಿ ಮಾಡಿಕೊಳ್ಳದ ಹೋರಾಟಗಾರರು. ದೇವರಾಜ ಅರಸು ಅವರು ಮಂತ್ರಿ ಸ್ಥಾನ ಕೊಡ್ತೀನಿ ಎಂದು ಕರೆದರೂ ಕನ್ನಡ ಪಕ್ಷ ಮತ್ತು ಕನ್ನಡ ಹೋರಾಟ ಬಿಡಲು ವಾಟಾಳ್ ಅವರು ಒಪ್ಪಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ಬ್ಯಾಂಕ್ ವೃತ್ತದ ನೃಪತುಂಗ ಮಂಟಪದಲ್ಲಿ ಭುವನೇಶ್ವರಿ ಹಾಗೂ ಅಣ್ಣಮ್ಮ ದೇವತೆಯ ವೈಭವದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು. ನಾವೆಲ್ಲರೂ ಕನ್ನಡ ನೆಲ, ಜಲ, ಭಾಷೆ, ಸಂಸ್ಕೃತಿ ಬಗ್ಗೆ ಅಭಿಮಾನ, ಪ್ರೀತಿ ಬೆಳೆಸಿಕೊಳ್ಳಬೇಕು. ನಮ್ಮ ನೆಲದಲ್ಲಿ ಕನ್ನಡದ ವಾತಾವರಣ ಬೆಳೆಸಬೇಕು. ಇದಕ್ಕಾಗಿ ಯಾರು ಯಾವುದೇ ಭಾಷೆಯಲ್ಲಿ ಮಾತನಾಡಿದರೂ ನೀವು ಕನ್ನಡದಲ್ಲೇ ಉತ್ತರ ಕೊಡಬೇಕು ಎಂದು ಕರೆ ನೀಡಿದರು.

ಕನ್ನಡ ನೆಲದಲ್ಲಿ ಬದುಕು ಕಟ್ಟಿಕೊಂಡ ಪ್ರತಿಯೊಬ್ಬರೂ ಕನ್ನಡದ ವಾತಾವರಣವನ್ನು ಗೌರವಿಸುತ್ತಾರೆ. ಕನ್ನಡ ನೆಲದಲ್ಲಿ ನಾವು ಕನ್ನಡದಲ್ಲೇ ಮಾತಾಡುತ್ತೇವೆ ಎನ್ನುವ ಶಪಥ ಮಾಡೋಣ ಎಂದು ಕರೆ ನೀಡಿದರು.

ನಮ್ಮ ಭೂಮಿ, ನಮ್ಮ ನೆಲ, ನಮ್ಮ ಜಲ, ನಮ್ಮ ಭಾಷೆ ಎನ್ನುವ ಅಭಿಮಾನ ಮೂಡಲಿ ಎಂದು ಕರೆ ನೀಡಿದರು. ಮೈಸೂರು ವಿಶ್ವ ವಿದ್ಯಾಲಯದಿಂದ ದೇವರಾಜು ಅರಸು ಅವರಿಗೆ ಮರಣೋತ್ತರ ಡಾಕ್ಟರೇಟ್ ಪ್ರಶಸ್ತಿ ನೀಡಬೇಕು ಎನ್ನುವ ವಾಟಾಳ್ ನಾಗರಾಜ್ ಮತ್ತು ಸಾ.ರಾ ಗೋವಿಂದು ಅವರ ಬೇಡಿಕೆಗೆ ಸ್ಪಂದಿಸಿದ ಮುಖ್ಯಮಂತ್ರಿಗಳು ಈ ಬಗ್ಗೆ ಸಿಂಡಿಕೇಟ್ ಸದಸ್ಯರ ಜೊತೆ ಚರ್ಚಿಸುವುದಾಗಿ ಭರವಸೆ ನೀಡಿದರು. ಇಲ್ಲಿಯವರೆಗೂ ಅರಸು ಅವರಿಗೆ ಡಾಕ್ಟರೇಟ್ ಏಕೆ ಕೊಟ್ಟಿಲ್ಲ ಎಂದು ಶಾಕ್ ಆಗಿದೆ. ಈ ಬಗ್ಗೆ ಗಮನ ಹರಿಸ್ತೀನಿ ಎಂದರು.



ಮೈಸೂರು ಬ್ಯಾಂಕ್ ವೃತ್ತದ ನೃಪತುಂಗ ಮಂಟಪದಲ್ಲಿ ಭುವನೇಶ್ವರಿ ಹಾಗೂ ಅಣ್ಣಮ್ಮ ದೇವತೆಯ ವೈಭವದ ಮೆರವಣಿಗೆಗೆ ಸಿಎಂ ಚಾಲನೆ ನೀಡಿದರು.

ಮೈಸೂರು ವಿವಿಯಲ್ಲಿ ನನಗೆ ಹಿಂದೆಯೇ ಡಾಕ್ಟರೇಟ್ ಕೊಡ್ತೀವಿ ಎಂದಿದ್ದರು. ಆದರೆ ನಾನು ಪಡೆಯಲಿಲ್ಲ. ಬೇಡ ಅಂದೆ. ಓದಿ, ಜ್ಞಾನ ವಿಸ್ತಾರ ಮಾಡಿಕೊಂಡು ಡಾಕ್ಟರೇಟ್ ಪಡೆಯಬೇಕು ಎನ್ನುವುದು ನನ್ನ ವೈಯುಕ್ತಿಕ ಭಾವನೆ ಎಂದರು. ನಾನು ವೈಯುಕ್ತಿಕವಾಗಿ ದ್ವಿಭಾಷಾ ಪರವಾಗಿ ಇದ್ದೇನೆ. ಆದರೆ ದ್ವಿಭಾಷಾ ನೀತಿಯಾಗಿ ಕಾನೂನು ಜಾರಿ ಆಗಬೇಕಾದರೆ ಕ್ಯಾಬಿನೆಟ್ ನಲ್ಲಿ ಚರ್ಚಿಸಬೇಕಾಗುತ್ತದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

**ಬೆಳಗಾವಿ ಕನ್ನಡ ನೆಲ, ಕರ್ನಾಟಕದ ಭಾಗ: ಸಿಎಂ** ಬೆಳಗಾವಿ ವಿಚಾರದಲ್ಲಿ ರಾಜಿ ಇಲ್ಲ. ಮಹಾಜನ್ ವರದಿಯೇ ಅಂತಿಮ. ಬೆಳಗಾವಿ ಕನ್ನಡದ ನೆಲ, ಕರ್ನಾಟಕದ ಭಾಗ. ಇದನ್ನು ಅಲ್ಲಗಳೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು. ಕನ್ನಡ ಹೋರಾಟಗಾರರ ಮೇಲಿನ ಕೇಸುಗಳನ್ನು ವಾಪಾಸ್ ತಗೊತೀವಿ: ಸಿ.ಎಂ.ಸಿದ್ದರಾಮಯ್ಯ ಘೋಷಣೆ ಕನ್ನಡ ಹೋರಾಟಗಾರರ ಮೇಲಿನ ಕೇಸುಗಳನ್ನು ವಾಪಾಸ್ ತಗೊತೀವಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

# ತಾಂತ್ರಿಕವಾಗಿಯೂ ಕನ್ನಡಾಭಿವೃದ್ಧಿಗೆ ನಮ್ಮ ಸರಕಾರ ಪಣ

## ಮೈಸೂರು ಜಿಲ್ಲಾಡಳಿತದಿಂದ ಕನ್ನಡ ರಾಜ್ಯೋತ್ಸವ ಆಚರಣೆ, ಸಚಿವ ಎಚ್.ಸಿ.ಮಹಾದೇವಪ್ಪ ಆಶಯ

**ಮೈಸೂರು:** ಬೆಳೆಯುತ್ತಿರುವ ತಂತ್ರಜ್ಞಾನಕ್ಕೆ ಪೂರಕವಾಗಿ ಕನ್ನಡ ಭಾಷೆಯ ಬಳಕೆಯನ್ನು ವೃದ್ಧಿಸಲು ಸರ್ಕಾರ ಕ್ರಮ ವಹಿಸಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ವತಿಯಿಂದ ಮೈಸೂರು ವಿಶ್ವವಿದ್ಯಾಲಯದ ಓವೆಲ್ ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಬೆಳೆಯುತ್ತಿರುವ ತಂತ್ರಜ್ಞಾನ, ಡಿಜಿಟಲ್ ಲೋಕದಲ್ಲಿ ಕನ್ನಡ ಭಾಷೆ ಹಿಂದುಳಿಯದಂತೆ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಕನ್ನಡದಲ್ಲಿ ಯೂನಿಕೋಡ್ ಅಕ್ಷರ ವಿನ್ಯಾಸ, ಪರಿವರ್ತಕಗಳು, ಮೊಬೈಲ್‌ನಲ್ಲಿ ಕನ್ನಡ ಬಳಕೆ, ಬ್ರೈಲ್ ಲಿಪಿಯಲ್ಲಿ ಕನ್ನಡ ಬಳಸುವ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿದೆ ಎಂದರು. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲೂ ಕನ್ನಡ ಲಿಪಿ ಹೆಚ್ಚು ಬಳಕೆಯಾಗುತ್ತಿರುವುದು ಸಂತಸದ ಬೆಳವಣಿಗೆಯಾಗಿದೆ. ವಿಜ್ಞಾನ-ತಂತ್ರಜ್ಞಾನದ ಜೊತೆ ಜೊತೆಗೂ ಕನ್ನಡವನ್ನು ಬಳಸಿ, ಬೆಳೆಸಬೇಕಾಗಿದೆ ಎಂದು ಆಶಿಸಿದರು.

ನಾಡಿನ ಕೀರ್ತಿಯನ್ನು ಹೆಚ್ಚಿಸಲು ಪ್ರಬುದ್ಧತೆಯನ್ನು ಬೆಳೆಸಿಕೊಂಡು ಒಗ್ಗಟ್ಟಾಗಿ ದುಡಿಯಬೇಕು. ಕನ್ನಡ ಭಾಷೆ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿ, ನೆಲ, ಜಲ, ಸಾಹಿತ್ಯ, ಸಂಸ್ಕೃತಿ ಸಂರಕ್ಷಣೆಗೆ ಸಂಕಲ್ಪ ಮಾಡೋಣ ಎಂದು ಸಲಹೆ ನೀಡಿದರು. ಹರಿದು ಹಂಚಿಹೋಗಿದ್ದ ಕನ್ನಡ ನಾಡಿನ ಏಕೀಕರಣಕ್ಕಾಗಿ ಆಲೂರು ವೆಂಕಟರಾಯರು ಹೋರಾಟ ಪ್ರಾರಂಭಿಸಿದರು.

1924ರಲ್ಲಿ ಬೆಳಗಾವಿಯ ಕಾಂಗ್ರೆಸ್ ಅಧಿವೇಶನದಲ್ಲಿ ಹುಯಿಲಗೊಳ ನಾರಾಯಣ ರಾಯರು ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಗೀತೆ ಹಾಡಿ ಗಮನ ಸೆಳೆದರು. 1950ರಲ್ಲಿ ಭಾರತವು ಗಣರಾಜ್ಯವಾಯಿತು. ನವೆಂಬರ್ 1, 1956ರಲ್ಲಿ ಭಾಷಾವಾರು ಪ್ರಾಂತ್ಯಗಳು ರಚನೆಯಾದವು. ಮುಂಬೈ, ಮದರಾಸ್, ಮೈಸೂರು, ಹೈದರಾಬಾದ್ ಹಾಗೂ ಕೊಡಗು ಪ್ರಾಂತ್ಯಗಳನ್ನು ಒಗ್ಗೂಡಿಸಿ 1956ರಲ್ಲಿ ಮೈಸೂರು ರಾಜ್ಯ ಸ್ಥಾಪಿಸಲಾಯಿತು. 1973ರಲ್ಲಿ ಡಿ.ದೇವರಾಜ್ ಅರಸ್ ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕ ಎಂದು ಮರು ನಾಮಕರಣ ಮಾಡಲಾಯಿತು.



ಜಿಲ್ಲಾ ಪಂಚಾಯಿತಿ ವತಿಯಿಂದ ಮೈಸೂರು ವಿಶ್ವವಿದ್ಯಾಲಯದ ಓವೆಲ್ ಮೈದಾನದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಸಾಧಕರಿಗೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕನ್ನಡ ನಾಡು ನುಡಿ ಹಾಗೂ ಸಂಸ್ಕೃತಿಗಳ ಉಳಿವು ಬೆಳವಣಿಗೆಗಾಗಿ ಶ್ರಮಿಸಿದ ಅಸಂಖ್ಯ ಜನರ ತ್ಯಾಗ ಬಲಿದಾನ ಸೇರಿವೆ. ಅವರೆಲ್ಲರ ಸೇವೆಯನ್ನು ರಾಜ್ಯೋತ್ಸವದ ಸಂದರ್ಭದಲ್ಲಿ ಸ್ಮರಿಸಬೇಕಿದೆ ಎಂದರು. ಆದಿ ಕವಿ ಪಂಪನಿಂದ ಇಲ್ಲಿಯವರೆಗೂ ಅನೇಕ ಕವಿಗಳು, ಸಾಹಿತಿಗಳು ನಾಡು ನುಡಿ ಹಾಗೂ ಕನ್ನಡ ನಾಡಿನ ಕಲೆ, ಸಂಸ್ಕೃತಿಯ ಬಗೆಗೆ ಸಮೃದ್ಧ ಸಾಹಿತ್ಯ ರಚಿಸಿದ್ದಾರೆ.

ಮೈಸೂರಿನ ನೆಲದಲ್ಲೂ ಅನೇಕ ಕವಿ, ಸಾಹಿತಿಗಳು ಹಾಗೂ ಕಲಾವಿದರು ಜನಿಸಿದ್ದಾರೆ. ಭಾರತೀಯ ಭಾಷೆಗಳಲ್ಲೇ ಅತಿ ಹೆಚ್ಚಿನ ಜ್ಞಾನಪೀಠ ಪ್ರಶಸ್ತಿಗಳು ಕನ್ನಡಕ್ಕೆ ಬಂದಿವೆ ಎಂದು ಸ್ಮರಿಸಿದರು. 21ನೇ ಶತಮಾನದ ಹೊತ್ತಿನಲ್ಲಿ ಕನ್ನಡ ಭಾಷೆ ಆಧುನಿಕತೆಯೊಂದಿಗೆ ತನ್ನದೇ ಅಸ್ಮಿತೆಯನ್ನು ಉಳಿಸಿಕೊಂಡಿದೆ. ಈ ಮಣ್ಣಿಗೊಂದು, ನುಡಿಗೊಂದು ಸೊಗಸಿದೆ, ಸೌಂದರ್ಯವಿದೆ. ಪ್ರಾದೇಶಿಕ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಕಾರ್ಯ ಮಾಡಬೇಕಿದೆ ಎಂದರು.

ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್ ಗೌಡ, ತನ್ವೀರ್ ಸೇಠ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕೆ.ಶಿವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಜಿಲ್ಲಾಧಿಕಾರಿ ಜಿ.ಲಕ್ಷಿ ?ಮಕಾಂತ ರೆಡ್ಡಿ, ಜಿಪಂ ಸಿಇಒ ಎಸ್.ಯುಕೇಶ್ ಕುಮಾರ್, ಮಹಾನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮುಂತಾದವರು ಹಾಜರಿದ್ದರು.

### ಆಕರ್ಷಕ ಪಥ ಸಂಚಲನ

**ಮೈಸೂರು:** 70ನೇ ಕನ್ನಡ ರಾಜ್ಯೋತ್ಸವ ಆಚರಣೆದ ಅಂಗವಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಧ್ವಜಾರೋಹಣ ನೆರವೇರಿಸಿದರು. ನಗರದ ಓವೆಲ್ ಮೈದಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಚಿವ ಡಾ.ಮಹದೇವಪ್ಪ ಪೊಲೀಸ್ ಪಡೆಗಳಿಂದ ಗೌರವ ವಂದನೆ ಸ್ವೀಕರಿಸಿದರು. ಪೊಲೀಸ್ ಇಲಾಖೆ, ಅಗ್ನಿ ಶಾಮಕ ದಳ, ಗೃಹ ರಕ್ಷಕ ದಳ, ಎನ್‌ಸಿಸಿ, ಎನ್‌ಎಸ್‌ಎಸ್ ಹಾಗೂ ವಿವಿಧ ಶಾಲೆಗಳ ಮಕ್ಕಳಿಂದ ಆಕರ್ಷಕ ಪಥ ಸಂಚಲನ ನಡೆಯಿತು. ಇದೇ ವೇಳೆ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಸನ್ಮಾನಿಸಿ ಗೌರವಿಸಲಾಯಿತು.

# ಕಾವೇರಿ ಜಲ ಚಳವಳಿಯ ಹೆಜ್ಜೆ ಗುರುತು

## ಗುಟುಕು ನೀರಿನ ಪರಿತಾಪದ ಇಣುಕು ನೋಟ



■ ಆನಂದ್ ಸ್ವಾಮಿ
ಲೇಖಕರು, ಮೈಸೂರು

**ನಾ**ಗರಿಕತೆಗಳ ಹುಟ್ಟು ಶುರುವಾಗಿದ್ದು ನದಿ ದಂಡೆಗಳಿಂದ. ಬದುಕು ಬಲಗೊಳ್ಳುತ್ತಾ ಬಂದಿದ್ದು ನದಿಗಳಿಂದ. ಮಹಮಹೋನ್ನತ ಸಾಮ್ರಾಜ್ಯಗಳು ಆಳಿದ್ದು, ತಮ್ಮ ಧ್ವಜ ನೆಟ್ಟು ಅಬ್ಬರಿಸಿದ್ದು ಇದೇ ನದಿಗಳ ಹರಿವಿನಿಂದ. ದೇಶ, ಕಾಲವನ್ನು ಮೀರಿ ಜಗತ್ತಿನ ಯಾವುದೇ ಭಾಗಕ್ಕೆ ಹೋದರೂ ಅಲ್ಲಿನ ನದಿಗಳು ತಮ್ಮದೇ ಆದ ಛಾಪು ಮೂಡಿಸಿವೆ. ಭಾರತದ ವಿಷಯ ಬಂದಾಗಂತೂ ನದಿಗಳನ್ನು ದೇವರ ಸ್ಥಾನದಲ್ಲಿ ಇಟ್ಟು ಪೂಜೆ ಮಾಡುತ್ತಾ ಬರುತ್ತಿದ್ದೇವೆ. ನದಿಗಳು ಭಾರತೀಯರ ಬದುಕಿನ ಜೀವ ತಂತು.

ಯಾವುದೇ ನದಿಯ ಇತಿಹಾಸವನ್ನು ಕೆದಕಿದರೆ ಅದರ ಒಳಗೆ ಸಾವಿರಾರು ಕಥೆಗಳು ಅಲೆ ಅಲೆಯಾಗಿ ತೇಲಿ ಬರುತ್ತವೆ. ಈ ಕಥೆಗಳಲ್ಲಿ ಯುದ್ಧ, ವಿಜಯ, ಪ್ರೀತಿ, ಕಲೆ, ಸಂಸ್ಕೃತಿ, ಸಾಹಿತ್ಯ, ನೋವು, ನಲಿವು, ಹೋರಾಟ, ಆಧ್ಯಾತ್ಮ ಎಲ್ಲವೂ ಮಿಳಿತಗೊಂಡಿರುತ್ತವೆ. ಭಾರತದಲ್ಲಿ ಕಾವೇರಿ, ತುಂಗಾ, ಭದ್ರ, ಕೃಷ್ಣ, ಭೀಮ, ಕಪಿಲಾ, ಗಂಗಾ, ಯುಮುನಾ, ಗೋದಾವರಿ, ನರ್ಮದಾ– ಹೀಗೆ ನೂರಾರು ನದಿಗಳ ಜಲ ಜಾಲವಿದೆ. ಒಂದೊಂದು ನದಿಯ ಜೊತೆಗೂ ಅಳಿಸಲಾಗದ ಬೃಹತ್ ಪರಂಪರೆ ಬೆಸೆದುಕೊಂಡು ಸಾಗುತ್ತಿದೆ. ಇದೇ ಬಗೆಯಲ್ಲಿ ಕರ್ನಾಟಕದ ಕಡೆ ಕಣ್ಣು ಹಾಯಿಸಿದರೆ ಇಲ್ಲಿ ಜೀವನದಿಯಾಗಿ ನಿಲ್ಲುವುದು ಕಾವೇರಿ.

ದಕ್ಷಿಣ ಭಾರತದ ಪ್ರಮುಖ ನದಿಯಾಗಿರುವ ಕಾವೇರಿ ಕರ್ನಾಟಕ, ತಮಿಳುನಾಡು, ಕೇರಳ, ಪಾಂಡಿಚೇರಿಗಳಲ್ಲಿ ತನ್ನ ಜಾಲವನ್ನು ಹೊಂದಿದ್ದು, ಕೋಟ್ಯಾಂತರ ಕುಟುಂಬಗಳ ಪಾಲಿನ ತಾಯಿಯಾಗಿದೆ. ನೂರಾರು ದೇವಸ್ಥಾನಗಳು, ಮಹಾನಗರಗಳು, ಗ್ರಾಮ, ಪಟ್ಟಣಗಳ ನಿರ್ಮಾಣಕ್ಕೆ ಕಾರಣವಾಗಿದೆ. ಅಪಾರ ಮತ್ತು ಅಪರೂಪದ ವನ್ಯ ಜೀವಿಗಳಿಗೆ, ಪ್ರಾಕೃತಿಕ ಸೌಂದರ್ಯಕ್ಕೆ, ವನ ವೃಕ್ಷ ಸಮೃದ್ಧಿಗೆ ನೀರುಣಿಸುತ್ತಾ ಸಕಲ ಜೀವರಾಶಿಗಳನ್ನು ನಿತ್ಯ ನಿರಂತರವಾಗಿ ಪೊರೆಯುತ್ತಾ ಬಂದಿದೆ.

ಕರ್ನಾಟಕದಲ್ಲಿ ಕಾವೇರಿ ಎನ್ನುವ ಹೆಸರು ಕೇಳಿದರೆ ಅದರ ಜೊತೆಗೆ ಒಂದು ಇಡೀ ಸೀಮೆಯ ಬದುಕು ತೆರೆದುಕೊಳ್ಳುತ್ತದೆ. ಅದರ ಜೊತೆಗೆ ಹೋರಾಟ, ಕಾವೇರಿಗಾಗಿ ಕನ್ನಡಿಗರು ಮಾಡಿದ ತ್ಯಾಗ, ತಮಿಳುನಾಡಿನ ಮೊಂಡುತನ, ಕೇಂದ್ರ ಸರ್ಕಾರಗಳ ಮಲತಾಯಿ ಧೋರಣೆ, ನ್ಯಾಯಾಲಯಗಳು ನೀಡಿದ ತೀರ್ಪಿನ ಪುಟಗಳು ತೆರೆದುಕೊಳ್ಳುತ್ತವೆ. ಕಾವೇರಿ ನೀರಿಗಾಗಿ ಹಗಲು ರಾತ್ರಿ ಎನ್ನದೇ ಮಾಡಿದ ಸತ್ಯಾಗ್ರಹಗಳು, ಚಳವಳಿಗಳು, ನಮ್ಮ ರಾಜಕೀಯ ಇಚ್ಛಾಶಕ್ತಿಯ ದರ್ಶನವೂ ಆಗುತ್ತದೆ.

**ಶತಮಾನಗಳ ಹೋರಾಟದ ಇಣುಕು ನೋಟ**

ಕ್ರಿ.ಶ.1260ರ ಕಾಲಘಟ್ಟದಲ್ಲಿ ಬದುಕಿದ್ದ ಕನ್ನಡದ ಪ್ರಸಿದ್ಧ ವ್ಯಾಕರಣಕಾರ ಕೇಶಿರಾಜ ತಮ್ಮ ಶಬ್ಧಮಣಿ ದರ್ಪಣ ಕೃತಿಯಲ್ಲಿ 'ಕಾವೇರಿಯ ಕಾಲನಾ ತಿಗುಳನೇನ್ ಕಡಗೊಂಡನೋ ಬಡ್ಡಿಗೊಂಡನೋ' ಎಂದು ಪ್ರಸ್ತಾಪ ಮಾಡಿದ್ದಾನೆ. ಅಂದರೆ ಕಾವೇರಿ ನದಿ ನೀರಿನ ವಿಚಾರವಾಗಿ 8 ಶತಮಾನಗಳ ಹಿಂದಿನಿಂದಲೂ ವ್ಯಾಜ್ಯ ಏರ್ಪಟ್ಟಿತ್ತು ಎಂಬುದನ್ನು ಇದು ಸೂಚಿಸುತ್ತದೆ. ಇದರ ಜೊತೆಗೆ ಪ್ರೊ. ನಂಜರಾಜ ಅರಸು ಅವರು ತಮ್ಮ ಕೃತಿ 'ನಾನು ಕನ್ನಂಬಾಡಿ ಕಟ್ಟೆ' ಯಲ್ಲಿ ತಿಳಿಸಿರುವಂತೆ 1150–60ರ ಕಾಲಘಟ್ಟದಲ್ಲಿ ಚೋಳ ದೊರೆ ಎರಡನೇ ರಾಜ ರಾಜನ್ ಕೂಡ ಕಾವೇರಿ ನದಿ ನೀರಿನ ಕುರಿತಾಗಿ ಹೊಯ್ಸಳ ಚಕ್ರವರ್ತಿ ಮೊದಲ ನರಸಿಂಹನ ಜೊತೆಗೆ ಕ್ಯಾತೆ ತೆಗೆದಿದ್ದ ಬಗ್ಗೆ ಉಲ್ಲೇಖ ಮಾಡಿದ್ದಾರೆ. 1804–07ರ ಸಂದರ್ಭದಲ್ಲಿ ಸಾಗರಕಟ್ಟೆ ಸಮೀಪದಲ್ಲಿ ಮಹಾರಾಣಿ ಲಕ್ಷ್ಮಮ್ಮಣ್ಣಿ ಅವರು ಕಟ್ಟೆ ನಿರ್ಮಾಣ ಮಾಡಲು ಮುಂದಾದಾಗ ತಂಜಾವೂರಿನ ರೈತರು ಪ್ರತಿಭಟನೆ ಮಾಡಿದ ಬಗ್ಗೆಯೂ ಮಾಹಿತಿ ನೀಡಿದ್ದಾರೆ. ಈ ಸಂಬಂಧವಾಗಿ ಅಂದಿನ ಮೈಸೂರಿನ ರೆಸಿಡೆಂಟ್ ಮೇಜರ್ ಮಿಲ್ಕ್ಸ್ ಪ್ರತಿವಾದದ ದಾಖಲೆಗಳು, ನಂತರದ ದಿವಾನ್ ಪೂರ್ಣಯ್ಯನವರ ನಿಲುವುಗಳು, ಅಂದಿನ ಭಾರತ ಸರಕಾರದ ಸರ್ವೇಕ್ಷಣಾ ವಿಭಾಗದ ಮುಖ್ಯಸ್ಥ ಮೇಜರ್ ಕೊಲಿನ್ ಮೆಕೆಂಜಿ ವರದಿಗಳ ಬಗ್ಗೆಯೂ ಪ್ರಸ್ತಾಪ ಮಾಡಿ ಕಾವೇರಿ ಹೋರಾಟದ ಇತಿಹಾಸದ ಬಗ್ಗೆ ಬೆಳಕು ಚೆಲ್ಲಿದ್ದಾರೆ.

**ಸ್ವಾತಂತ್ರ್ಯಾನಂತರದ ಹೆಜ್ಜೆಗಳು**

ತಮಿಳುನಾಡಿನ ತಂಜಾವೂರಿನ ರೈತ ಸಂಘವು 1983 ರಲ್ಲಿ, ಸುಪ್ರೀಂ ಕೋರ್ಟ್‌ನೆ ಮೊರೆಹೋಗಿ ಕಾವೇರಿ ನದಿ ನೀರಿನ ಹಂಚಿಕೆ ಕುರಿತಾದ ಸಮಸ್ಯೆಯನ್ನು ಬಗೆಹರಿಸಲು ಪ್ರತ್ಯೇಕ ನ್ಯಾಯಾಧಿಕರಣ ಸ್ಥಾಪಿಸಬೇಕು ಎಂದು ಒತ್ತಾಯಿಸಿತು. ನಂತರದಲ್ಲಿ ತಮಿಳುನಾಡು ಸರ್ಕಾರದಿಂದಲೇ ಈ ಬಗೆಗಿನ ಕಾನೂನು ಹೋರಾಟ ಮುಂದುವರಿಯಿತು. ಕಡೆಗೆ 1990ರ ಏಪ್ರಿಲ್‌ನಲ್ಲಿ ಸುಪ್ರೀಂ ಕೋರ್ಟ್ ಅಂತಿಮವಾಗಿ ನ್ಯಾಯಾಧಿಕರಣವನ್ನು ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿತು.


1991ರಲ್ಲಿ ಅಂದಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಅವರು ಕಾವೇರಿ ನದಿ ನೀರು ನ್ಯಾಯಾಧಿಕರಣದ ಅಧ್ಯಕ್ಷತೆ ವಹಿಸಿ ಬರ ಪೀಡಿತ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಿದ್ದರು. ಇದರ ಆಧಾರದ ಮೇಲೆ, ಜೂನ್ 25, 1991 ರಂದು ಮಧ್ಯಂತರ ನಿರ್ದೇಶನವನ್ನು ನೀಡಿತು. ಈ ನಿರ್ದೇಶನವು ತಮಿಳುನಾಡಿಗೆ ವಾರ್ಷಿಕ 205 ಟಿಎಂಸಿ ನೀರನ್ನು ಬಿಡುಗಡೆ ಮಾಡುವಂತೆ ಕರ್ನಾಟಕಕ್ಕೆ ಆದೇಶಿಸಿತು ಇದಕ್ಕೆ ಕರ್ನಾಟಕದಿಂದ ತೀವ್ರ ವಿರೋಧ ವ್ಯಕ್ತವಾಗಿ ಎರಡೂ ರಾಜ್ಯಗಳಲ್ಲಿ ಗಲಭೆಗಳು ಉಂಟಾದವು.

ಇನ್ನು 2003ರ ಸಂದರ್ಭದಲ್ಲಿ ರಾಜ್ಯದಲ್ಲಿ ತೀವ್ರವಾಗಿ ಮಳೆ ಕೊರತೆ ಉಂಟಾಯಿತು. ತೀವ್ರ ಬರಗಾಲ ಏರ್ಪಟ್ಟು, ಕಾವೇರಿಕೊಳ್ಳದಲ್ಲಿ ಕುಡಿಯುವ ನೀರಿಗೂ ಬರ ಬಂದಿತ್ತು. ಈ ವೇಳೆ ಕಾವೇರಿ ನದಿ ನೀರಿನ ವಿಚಾರವಾಗಿ ತಮಿಳುನಾಡು ಮತ್ತು ಕರ್ನಾಟಕದ ನಡುವೆ ನಡೆದ ಹೋರಾಟಗಳು ರಾಷ್ಟ್ರಮಟ್ಟದಲ್ಲಿ ಸಮಸ್ಯೆಯಾಗಿ ತಲೆದೋರಿತ್ತು. ಎರಡೂ ರಾಜ್ಯಗಳ ನಡುವೆ ದೊಡ್ಡ ಕಂದಕವೇ ಏರ್ಪಟ್ಟಿತ್ತು.

**2018ರ ತೀರ್ಪಿನ ಅನುಸರಣೆ**

2018ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಮುಖ್ಯವಾಗಿ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ಸಮ್ಮತಿಯೊಂದಿಗೆ ಸದ್ಯ ಜಾರಿಯಲ್ಲಿದೆ. ಇದರ ಪ್ರಕಾರ ಹಿಂದಿನ ಆದೇಶಗಳಿಗೆ ಹೋಲಿಸಿದರೆ ಕರ್ನಾಟಕಕ್ಕೆ ಹೆಚ್ಚುವರಿಯಾಗಿ 14.75 ಟಿಎಂಸಿ ನೀರು ಲಭ್ಯವಾಯಿತು. ಇಷ್ಟು ಪ್ರಮಾಣದ ನೀರು ತಮಿಳುನಾಡಿಗೆ ಕಡಿಮೆಯಾಯಿತು. ಅಂತಿಮವಾಗಿ ಕರ್ನಾಟಕಕ್ಕೆ 284.75 ಟಿಎಂಸಿ, ತಮಿಳುನಾಡಿಗೆ 404.25 ಟಿಎಂಸಿ ಹಂಚಿಕೆ ಮಾಡಲಾಯಿತು. ಇದರ ಜೊತೆಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ಕಾವೇರಿ ನೀರು ನಿಯಂತ್ರಣ ಸಮಿತಿ ರಚನೆಗೆ ಆದೇಶ ಮಾಡಲಾಯಿತು. ■

### ಬ್ರಿಟೀಷರ ಕಾಲದಿಂದಲೇ ಅನ್ಯಾಯ..!



1892ರಲ್ಲಿ ಏರ್ಪಟ್ಟ ಮೈಸೂರು – ಮದ್ರಾಸ್ ಪ್ರಾಂತ್ಯಗಳ ನಡುವಿನ ಒಪ್ಪಂದದ ನಂತರ ಕಾವೇರಿ ನದಿ ನೀರಿನ ಹಂಚಿಕೆ ಸಂಬಂಧ ದೊಡ್ಡ ದೊಡ್ಡ ಹೋರಾಟಗಳೇ ನಡೆದಿವೆ. ಅಂದಿಗೆ ಇದ್ದ ರಾಜಕೀಯ ವ್ಯವಸ್ಥೆಯಲ್ಲಿ ಮದ್ರಾಸ್ ಪ್ರಾಂತ್ಯ ನೇರವಾಗಿ ಬ್ರಿಟೀಷ್ ಆಡಳಿತಕ್ಕೆ ಒಳಪಟ್ಟಿತ್ತು. ಮೈಸೂರು ಪ್ರಾಂತ್ಯ ಬ್ರಿಟೀಷರ ಅಧೀನದಲ್ಲಿ ಇದ್ದ ಒಡೆಯರ್ ಆಳ್ವಿಕೆಯಲ್ಲಿ ಇತ್ತು. ಹೀಗಾಗಿ ಪ್ರಬಲವಾಗಿದ್ದ ಬ್ರಿಟೀಷ್ ಸಾಮ್ರಾಜ್ಯ ತನ್ನ ನೇರ ಆಳ್ವಿಕೆಯಲ್ಲಿದ್ದ ಮದ್ರಾಸ್ ಪ್ರಾಂತ್ಯಕ್ಕೆ ಹೆಚ್ಚಿನ ಅನುಕೂಲ ಆಗುವ ನಿಟ್ಟಿನಲ್ಲಿ ಕಾವೇರಿ ನದಿ ನೀರಿನ ಒಪ್ಪಂದವನ್ನು ಮಾಡಿತ್ತು. ಅದು ನಂತರದ ದಿನಗಳಲ್ಲಿ ತಮಿಳುನಾಡಿಗೆ ಹೆಚ್ಚಿನ ಅನುಕೂಲ ಮಾಡಿಕೊಟ್ಟಿದ್ದು, ಕರ್ನಾಟಕದ ಪಾಲಿಗೆ ಅನ್ಯಾಯವೇ ಆಗಿದೆ. ದೇಶ ಸ್ವತಂತ್ರ್ಯಗೊಂಡ ನಂತರವೂ ಕಾವೇರಿ ನದಿ ನೀರಿನ ಹಂಚಿಕೆ ವಿಚಾರವಾಗಿ ನಾಲ್ಕು ರಾಜ್ಯಗಳು ಕಾನೂನು ಹೋರಾಟ ಮುಂದುವರಿಸಿಕೊಂಡೇ ಬಂದಿವೆ. 2018ರಲ್ಲಿ ಸುಪ್ರೀಂ ಕೋರ್ಟ್ ಅಂತಿಮ ಆದೇಶ ನೀಡಿ ನೀರು ಹಂಚಿಕೆ ಮಾಡಿತು. ಅಲ್ಲದೇ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವನ್ನು ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವ ಮೂಲಕ ಶತ ಶತಮಾನಗಳ ಜಲ ವಿವಾದಕ್ಕೆ ಇತಿಶ್ರೀ ಹಾಡುವ ಹೆಜ್ಜೆ ಇಟ್ಟಿತು. ಆದರೆ ಈಗಲೂ ನಿಗದಿತ ಪ್ರಮಾಣದಲ್ಲಿ ಮಳೆ ಸುರಿದರೆ ಯಾವುದೇ ಸಮಸ್ಯೆ ಇಲ್ಲ. ಆದರೆ ಮಳೆ ಕೊರತೆ ಉಂಟಾದರೆ ಎರಡೂ ರಾಜ್ಯಗಳ ನಡುವೆ ಜಲ ಕದನ ಸಹಜ ಎನ್ನುವ ಪರಿಸ್ಥಿತಿ ಮುಂದುವರಿದುಕೊಂಡೇ ಬಂದಿದೆ.

# ಕಲಾಮಂದಿರದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ

**ಮೈಸೂರು:** ನಗರದ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 70ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ 'ಹಾಡಿರೆ ರಾಗಗಳ – ತೂಗಿರೆ ದೀಪಗಳ' ಕಾರ್ಯಕ್ರಮದಲ್ಲಿ ಹಲವಾರು ಕಲಾ ತಂಡದಿಂದ ಜಾನಪದ ಗೀತೆ, ಭಕ್ತಿ ಗೀತೆ, ಭಾವಗೀತೆಗಳ ಮೂಲಕ ಕಾರ್ಯಕ್ರಮ ನಡೆಯಿತು.

ಕಲಾ ಪ್ರಕಾರ ಅಮ್ಮ ರಾಮಚಂದ್ರ ತಂಡದಿಂದ ಸುಗಮ ಸಂಗೀತ, ಪದ್ಮ ಮತ್ತು ತಂಡದಿಂದ ಜಾನಪದ ಗೀತೆ, ಸಿಂಚನ ಮತ್ತು ತಂಡದಿಂದ ಭಾವಗೀತೆ, ಜಿ.ಎಸ್. ಮೋಹನ್ ಮತ್ತು ತಂಡದಿಂದ ಬೀಸು ಕಂಸಾಳೆ, ಪುಟ್ಟ ಮಹದೇವಪ್ಪ ತಂಡದಿಂದ ಭಕ್ತಿ ಸಂಗೀತ, ತಾಯಮ್ಮ, ಚಿಕ್ಕತಾಯಮ್ಮ ಹಾಗೂ ಚಿಕ್ಕಮಂಚಮ್ಮ ತಂಡದಿಂದ ಸೋಬಾನೆ ಪದ, ಪುನೀತ್ ಕುಮಾರ್ ತಂಡದಿಂದ ಡೊಳ್ಳು ಕುಣಿತ ಯಶಸ್ವಿಯಾಗಿ ಮೂಡಿಬಂದಿತು.

ಕಲಾವಿದರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಎಂ. ಡಿ ಸುದರ್ಶನ್ ಅವರು ಕಲಾತಂಡದವರಿಗೆ ಪ್ರಮಾಣ ಪತ್ರ ವಿತರಣೆ ಮಾಡಿ ಗೌರವಿಸಿದರು.



ನಗರದ ಕರ್ನಾಟಕ ಕಲಾಮಂದಿರದಲ್ಲಿ 70ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ 'ಹಾಡಿರೆ ರಾಗಗಳ – ತೂಗಿರೆ ದೀಪಗಳ' ಕಾರ್ಯಕ್ರಮದಲ್ಲಿ ಕಂಸಾಳೆ ಕಲಾವಿದರ ವಿಶೇಷ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು.

# ಸೆಸ್ಕ್ ಕಚೇರಿಯಲ್ಲಿ ಕನ್ನಡ ರಾಜ್ಯೋತ್ಸವ

**ಮೈಸೂರು:** ಕನ್ನಡ ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಸರ್ಕಾರಗಳ ಪ್ರಯತ್ನಗಳಿಗೆ ನಾವೆಲ್ಲರೂ ಕೈಜೋಡಿಸಬೇಕು ಎಂದು ಶಾಸಕರೂ ಆದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಮನವಿ ಮಾಡಿದರು.

ಮೈಸೂರಿನ ನಿಗಮದ ಪ್ರಧಾನ ಕಚೇರಿಯಲ್ಲಿ ಶನಿವಾರ ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಕನ್ನಡ ನಮ್ಮ ಮಾತೃ ಭಾಷೆಯಾದರೂ ಕನ್ನಡ ಭಾಷೆಯ ಮೇಲೆ ಅಭಿಮಾನ ಇದ್ದರೂ ಕನ್ನಡವನ್ನು ಮರೆಯುತ್ತಿದ್ದೇವೆ. ದಿನನಿತ್ಯದ ಕೆಲಸಗಳಲ್ಲಿ ಕನ್ನಡ ಬಳಕೆಗೆ ಹಿಂದೇಟು ಹಾಕುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಮಾತನಾಡಿ, ನಿತ್ಯದ ಕಚೇರಿಗಳಲ್ಲಿ ನಮಗೆ ಅನುಕೂಲಗಳೂ ಇವೆ, ತೊಂದರೆಗಳೂ ಇರಬಹುದು. ನಾವೆಲ್ಲವೂ ತಂಡವಾಗಿ ಕೆಲಸ ಮಾಡಿದರೆ ಪರಿಣಾಮಕಾರಿಯಾಗಲಿದೆ ಎಂದರು.

ಇದಕ್ಕೂ ಮುನ್ನ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ಸೆಸ್ಕ್ ಮುಖ್ಯ ಆರ್ಥಿಕ ಅಧಿಕಾರಿ ಜಿ.ರೇಣುಕಾ, ಮುಖ್ಯ ಪ್ರಧಾನ ವ್ಯವಸ್ಥಾಪಕಿ(ತಾಂತ್ರಿಕ) ಶರಣಮ್ಮ ಎಸ್. ಜಂಗಿನ್, ಮುಖ್ಯ ಪ್ರಧಾನ ವ್ಯವಸ್ಥಾಪಕಿ(ಆಂತರಿಕ ಲೆಕ್ಕ ಪರಿಶೋಧನೆ) ಲಿಂಗರಾಜಮ್ಮ, ಪ್ರಧಾನ ವ್ಯವಸ್ಥಾಪಕಿ ಡಾ.ಬಿ.ಆರ್.ರೂಪಾ, ಜಾಗೃತ ದಳದ ಪೊಲೀಸ್ ಅಧೀಕ್ಷಕಿ ಸವಿತಾ ಹೂಗಾರ್, ಪ್ರಧಾನ ವ್ಯವಸ್ಥಾಪಕ (ಖರೀದಿ) ಎಲ್. ಲೋಕೇಶ್, ಪ್ರಧಾನ ವ್ಯವಸ್ಥಾಪಕ(ಐಟಿ ಮತ್ತು ಎಂಐಎಸ್) ರಾಮಸ್ವಾಮಿ ಮುಂತಾದವರಿದ್ದರು.

# ಮಹಾಲಕ್ಷ್ಮಿ ದೇವಿಯ ವಿಗ್ರಹ ಪ್ರತಿಷ್ಠಾಪನೆ

**ರಾವಂದೂರು:** ಗ್ರಾಮದ ಶ್ರೀ ಮಹಾಲಕ್ಷ್ಮಿ ದೇವಿಯ ನೂತನ ದೇವಾಲಯ ಮತ್ತು ವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ರಮವು ವಿಜೃಂಭಣೆಯಿಂದ ಜರುಗಿತು.

ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾಗಿದ್ದ ಶ್ರೀ ಮಹಾಲಕ್ಷ್ಮೀದೇವಿ ನೂತನ ದೇವಾಲಯ ಹಾಗೂ ವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ರಮ ಗುರುವಾರ ರಾತ್ರಿಯಿಂದಲೂ ವಿಶೇಷ ಹೋಮ ಹವನ ಪೂಜೆಗಳನ್ನು ನೆರವೇರಿಸಿ ಶುಕ್ರವಾರ ಬೆಳಗ್ಗೆ ವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಜರುಗಿಸಲಾಯಿತು.

ನಂತರ ದೇವಾಲಯದಲ್ಲಿ ಅಷ್ಟಲಕ್ಷ್ಮಿಯ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಹಾಗೂ ದೇವಾಲಯಕ್ಕೆ ಬಂದಂತಹ ಸಾವಿರಾರು ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಈ ದೇವಾಲಯದ ಹಾಗೂ ವಿವಿಧ ತಾಲೂಕಿನಿಂದ ಬಂದ ದೇವಾಲಯದ ಕುಟುಂಬದ ಭಕ್ತಾದಿಗಳು ಪೂಜೆ ಸಲ್ಲಿಸಿ ಭಕ್ತಿ ಸಮರ್ಪಿಸಿ ಅನ್ನ ಸಂತರ್ಪಣೆ ಪ್ರಸಾ ಸ್ವೀಕರಿಸಿದರು.



ಪಿರಿಯಾಪಟ್ಟಣ ತಾಲೂಕು, ರಾವಂದೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾದ ದೇವಾಲಯದಲ್ಲಿ ಮಹಾಲಕ್ಷ್ಮಿ ದೇವಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಯಿತು.

# ಪಿರಿಯಾಪಟ್ಟಣದಲ್ಲಿ ಕನ್ನಡ ರಾಜ್ಯೋತ್ಸವ ಸಂಭ್ರಮ

**ಪಿರಿಯಾಪಟ್ಟಣ:** ಕನ್ನಡ ಸಾಹಿತ್ಯಪರಿಷತ್ತು ಮೊದಲಬಾರಿಗೆ ತನ್ನದೇ ನೆಲದಲ್ಲಿ ಧ್ವಜಾರೋಹಣ ಮಾಡಿದ್ದು ಹೆಮ್ಮೆಯ ಸಂಗತಿ ಎಂದು ಕನ್ನಡ ಸಾಹಿತ್ಯಪರಿಷತ್ತು ಅಧ್ಯಕ್ಷ ನವೀನ್‌ಕುಮಾರ್ ತಿಳಿಸಿದರು.

■ **ತೋಪಿನಕೊಳದಲ್ಲಿ ಧ್ವಜಾರೋಹಣ**
■ **ವಿವಿಧ ಗಣ್ಯರು ಭಾಗಿ**

ಪಿರಿಯಾಪಟ್ಟಣದ ತೋಪಿನಕೊಳದಲ್ಲಿ ಕನ್ನಡ ಸಾಹಿತ್ಯ ಭವನಕ್ಕೆ ಮೀಸಲಾಗಿರುವ ಜಾಗದಲ್ಲಿ ಕಸಾಪ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಜಿಲ್ಲೆಯಲ್ಲಿಯೇ ಕನ್ನಡ ಭವನ ನಿರ್ಮಾಣಕ್ಕೆ ಜಾಗಪಡೆದಿರುವ ಮೊದಲ ತಾಲ್ಲೂಕು ಎಂಬ ಹೆಗ್ಗಳಿಕೆ ತಾಲೂಕು ಕಸಾಪಗೆ ಸೇರಿದ್ದಾಗಿದ್ದು ಮುಂದಿನ ದಿನಗಳಲ್ಲಿ ಈ ಕನ್ನಡ ಭವನ ನಿರ್ಮಾಣಕ್ಕೆ ಪ್ರತಿಯೊಬ್ಬ ತಾಲ್ಲೂಕಿನ ಕನ್ನಡಿಗರು ಕೈಜೋಡಿಸಬೇಕು. ಈ ಮೂಲಕ ಕನ್ನಡ ಸಾಹಿತ್ಯ ಪರಿಷತ್ತಿಗೆ ಒಂದು ನೆಲ ನಿರ್ಮಾಣಬೇಕಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಪರಿಸರವಾದಿ ಕೌಲನಹಳ್ಳಿ ಸೋಮಶೇಖರ್ ಮಾತನಾಡಿ ನಾಡು ನುಡಿಯ ಬಗ್ಗೆ ಪ್ರತಿಯೊಬ್ಬರು ಗೌರವವನ್ನು ಹೊಂದಿರಬೇಕು. ತಾಲ್ಲೂಕಿನಲ್ಲಿ ಕನ್ನಡ ಸಾಹಿತ್ಯ ಭವನಕ್ಕೆ ಅಗತ್ಯವಾದ ಸಹಕಾರವನ್ನು ನೀಡಲಾಗುವುದು ಹಾಗು ಸಂಸದರ ನಿಧಿಯಿಂದಲೂ ಸಾಹಿತ್ಯಭವನಕ್ಕೆ ಅಗತ್ಯ ಸಹಕಾರ ನೀಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯಪರಿಷತ್ತು ಸಹಕಾರ್ಯದರ್ಶಿ ನಂಜುಂಡಸ್ವಾಮಿ, ಕಸಬಾ ಹೋಬಳಿ ಅಧ್ಯಕ್ಷ ಶಿಕ್ಷಕ ಕಾಂತರಾಜು, ಆಯಿತನಹಳ್ಳಿ, ಗಣೇಶ್, ಮಹಿಳಾ ಘಟಕದ ಅಧ್ಯಕ್ಷ ಆಶಾಮಹದೇವ್‌ರಾವ್, ಮಾಜಿ ಖಜಾಂಜಿ ಬಿರ್ಲಾಹರೀಶ್, ಪುರಸಭೆ ಮಾಜಿ ಅಧ್ಯಕ್ಷರಾದ ಮಂಜುನಾಥ್‌ಸಿಂಗ್, ವೇಣುಗೋಪಾಲ್, ಲಯನ್ಸ್‌ಸಂಸ್ಥೆ ಅಧ್ಯಕ್ಷ ಗಿರೀಶ್, ಶಿಕ್ಷಕ ಶ್ರೀನಿವಾಸ್, ಹಿಂದೂಜಾಗರಣ ಸಮಿತಿಯ ಭವ್ಯಮಂಜುನಾಥ್, ಮುಖಂಡರಾದ ಚಂದ್ರಶೇಖರ್, ಇಲಿಯಾಸ್ ಖಾನ್, ನಾಗೇಶ್, ಪತ್ರಕರ್ತರಾದ ಪಿ.ಡಿ.ಪ್ರಸನ್ನ, ವೆಂಕಟೇಶ್, ದೇವೇಗೌಡ ಮತ್ತಿತರರು ಹಾಜರಿದ್ದರು.



ಪಿರಿಯಾಪಟ್ಟಣದ ತೋಪಿನ ಕೊಳದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಕಸಾಪ ಅಧ್ಯಕ್ಷ ನವೀನ್‌ಕುಮಾರ್ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು.

# ಬ್ಯಾಂಕ್‌ಗಳಲ್ಲಿ ಕನ್ನಡ ಭಾಷೆ ಕಡ್ಡಾಯ

## ಶಾಸಕ ದರ್ಶನ್ ಧ್ರುವನಾರಾಯಣ್ ಸೂಚನೆ ■ ನಂಜನಗೂಡಿನಲ್ಲಿ ಕನ್ನಡ ರಾಜ್ಯೋತ್ಸವ

**ನಂಜನಗೂಡು:** ಹಿಂದಿ ರಾಷ್ಟ್ರಭಾಷೆ. ಬ್ಯಾಂಕುಗಳಲ್ಲಿ ಹಿಂದಿ ಭಾಷೆಯಲ್ಲಿ ಮಾತನಾಡುವುದು ಸಾಮಾನ್ಯವಾಗಿದೆ. ಆದರೆ ತಾಲ್ಲೂಕಿನಲ್ಲಿ ಹೆಚ್ಚಾಗಿ ರೈತರು ವ್ಯವಹಾರ ಮಾಡುವುದರಿಂದ ಬ್ಯಾಂಕ್ ಸಿಬ್ಬಂದಿಗಳು ಕನ್ನಡ ಭಾಷೆಯನ್ನು ಕಲಿತುಕೊಂಡು ಸ್ಥಳೀಯರೊಂದಿಗೆ ವ್ಯವಹರಿಸಬೇಕಾಗಿದೆ. ಇನ್ಮುಂದೆ ತಾಲ್ಲೂಕಿನ ಎಲ್ಲಾ ಬ್ಯಾಂಕ್ ಗಳಲ್ಲಿಯೂ ಕನ್ನಡ ಭಾಷೆ ಕಡ್ಡಾಯ ಮಾಡಬೇಕು ಎಂದು ಆದೇಶ ನೀಡುವಂತೆ ತಹಶೀಲ್ದಾರ್ ಅವರಿಗೆ ಸೂಚನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ಧ್ರುವ ನಾರಾಯಣ್ ತಿಳಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ನಂಜನಗೂಡು ನಗರದ ತಾಲ್ಲೂಕು ಕಛೇರಿ ಆವರಣದಲ್ಲಿ ಶನಿವಾರ 70ನೇ ಕನ್ನಡ ರಾಜ್ಯೋತ್ಸವ ದಿನಾಚರಣೆಯಲ್ಲಿ ತಹಶೀಲ್ದಾರ್ ಶಿವಕುಮಾರ್ ಕಾಸ್ನೂರು ರಾಷ್ಟ್ರ ಧ್ವಜ ಮತ್ತು ಕನ್ನಡ ಬಾವುಟದ ಧ್ವಜಾರೋಹಣೆಯನ್ನು ನೆರವೇರಿಸಿದರು.

ನಂತರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಸಕರಾದ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಈಗಿನ ಮಕ್ಕಳಲ್ಲಿಯೂ ಕನ್ನಡ ಭಾಷೆ ತಾತ್ಸಾರ ಮನೋಭಾವನೆ ಇದೆ. ಕನ್ನಡವನ್ನು ಬಳಸದೆ ಇರುವುದು ಬೇಸರ ತರುತ್ತದೆ. ನಾನು ಶಾಲೆಯಲ್ಲಿ ಓದುತ್ತಿದ್ದಾಗ ಇಂಗ್ಲಿಷ್ ಮಾಧ್ಯಮ ಖಾಸಗಿ ಶಾಲೆಗಳಲ್ಲಿ ಕನ್ನಡ ಭಾಷೆ ಮಾತನಾಡಿದರೆ ದಂಡ ಹಾಕುತ್ತಿದ್ದರು. ಅದು ಈಗಲೂ ಹಲವು ಶಾಲೆಯಲ್ಲಿ ಇದೆಯೆ ಎಂದು ಪ್ರಶ್ನಿಸಿದರು.

ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕ್ ಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಕನ್ನಡ ಭಾಷೆ ಮಾತನಾಡುತ್ತಿಲ್ಲ ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಕನ್ನಡ ನಾಡಿನಲ್ಲಿ ಕೆಲಸ ಮಾಡುತ್ತಿರುವ ಮ್ಯಾನೇಜರ್ ಮತ್ತು ಸಿಬ್ಬಂದಿ ಕನ್ನಡ ಭಾಷೆಯನ್ನು ಕಲಿತು ಮಾತನಾಡಬೇಕು. ಕನ್ನಡ ಭಾಷೆಗೆ ಪ್ರಾತಿನಿಧ್ಯ ನೀಡಲೇಬೇಕು. ಇನ್ನು ಮುಂದೆ ನಮ್ಮ ನಂಜನಗೂಡು ತಾಲ್ಲೂಕಿನಲ್ಲಿರುವ ಎಲ್ಲಾ ಬ್ಯಾಂಕ್ ಗಳಲ್ಲಿಯೂ ಪ್ರತಿಯೊಬ್ಬರು ಕನ್ನಡ ಭಾಷೆಯನ್ನು ಗ್ರಾಹಕರೊಂದಿಗೆ ಕಡ್ಡಾಯವಾಗಿ ಮಾತನಾಡಬೇಕು ಎಂದು ತಹಶೀಲ್ದಾರ್ ರವರು ಆದೇಶ ನೀಡುವಂತೆ ಶಾಸಕ ದರ್ಶನ್ ಧ್ರುವನಾರಾಯಣ್ ಸೂಚನೆ ನೀಡಿದರು.

ಇನ್ನು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಅಂಗನವಾಡಿ ಸಿಬ್ಬಂದಿ ಪೌರಕಾರ್ಮಿಕರು ಹಾಗೂ ಕನ್ನಡ ಐಚ್ಛಿಕ ಭಾಷೆಯಲ್ಲಿ ಶೇಕಡ ನೂರರಷ್ಟು ಅಂಕ ಪಡೆದ ವಿದ್ಯಾರ್ಥಿಗಳನ್ನು ಗುರುತಿಸಿ ತಾಲ್ಲೂಕು ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ನಂಜನಗೂಡು ನಗರದ ತಾಲ್ಲೂಕು ಕಛೇರಿ ಆವರಣದಲ್ಲಿ ಶನಿವಾರ ನಡೆದ 70ನೇ ಕನ್ನಡ ರಾಜ್ಯೋತ್ಸವ ದಿನಾಚರಣೆಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿದರು.

> ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕ್ ಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಕನ್ನಡ ಭಾಷೆ ಮಾತನಾಡುತ್ತಿಲ್ಲ ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಕನ್ನಡ ನಾಡಿನಲ್ಲಿ ಕೆಲಸ ಮಾಡುತ್ತಿರುವ ಮ್ಯಾನೇಜರ್ ಮತ್ತು ಸಿಬ್ಬಂದಿ ಕನ್ನಡ ಭಾಷೆಯನ್ನು ಕಲಿತು ಮಾತನಾಡಬೇಕು. ಕನ್ನಡ ಭಾಷೆಗೆ ಪ್ರಾತಿನಿಧ್ಯ ನೀಡಲೇಬೇಕು.
>
> -ದರ್ಶನ್ ಧ್ರುವನಾರಾಯಣ್, ಶಾಸಕ

ಈ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಹಶೀಲ್ದಾರ್ ಶಿವಕುಮಾರ್ ಕಾಸ್ನೂರು, ನಗರಸಭೆ ಅಧ್ಯಕ್ಷ ಶ್ರೀಕಂಠ, ಸಾಹಿತಿ ಡಾ.ಸಿ ನಾಗಣ್ಣ, ಡಿವೈಎಸ್ಪಿ ರಘು, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಜೆರಾಲ್ಡ್ ರಾಜೇಶ್, ಕ್ಷೇತ್ರಶಿಕ್ಷಣಾಧಿಕಾರಿ ಮಹೇಶ್, ಪೌರಾಯುಕ್ತ ವಿಜಯ್, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷೆ ಲತಾ ಮುದ್ದು ಮೋಹನ್ ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು. ನಗರದ ವಿವಿಧ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಕನ್ನಡ ರಾಜ್ಯೋತ್ಸವ ದಿನಾಚರಣೆಯಲ್ಲಿ ತಹಶೀಲ್ದಾರ್ ಶಿವಕುಮಾರ್ ಕಾಸ್ನೂರು ರಾಷ್ಟ್ರಧ್ವಜ ಹಾಗೂ ಕನ್ನಡ ಬಾವುಟದ ಧ್ವಜಾರೋಹಣ ನೆರವೇರಿಸಿದರು.

# ಮಕ್ಕಳ ಕೊಂದು ತಾಯಿ ಆತ್ಮಹತ್ಯೆ

## ಬೆಟ್ಟದಪುರ ಗ್ರಾಮದಲ್ಲಿ ಮನಕಲಕುವ ದುರ್ಘಟನೆ

**ಪಿರಿಯಾಪಟ್ಟಣ:** ತಾಲೂಕಿನ ಬೆಟ್ಟದಪುರ ಗ್ರಾಮದಲ್ಲಿ ಹಸು ಮಕ್ಕಳನ್ನು ಕೊಂದು ತಾನೂ ತಾನು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಮನಕಲಕುವ ಘಟನೆ ಬೆಟ್ಟದಪುರದಲ್ಲಿ ನಡೆದಿದೆ.

9 ದಿನದ ಹಸುಗೂಸು ಮತ್ತು ಮೂರು ವರ್ಷದ ಮಗುವನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡಿರುವ ಗೃಹಿಣಿ ಅರಬಿಯಾ ಬಾನು. ಕಳೆದ ಮೂರು ವರ್ಷಗಳ ಹಿಂದೆ ಅರೇನಹಳ್ಳಿ ಮುಸಾವೀರ್ ಎಂಬ ವ್ಯಕ್ತಿಗೆ ವಿವಾಹವಾಗಿದ್ದ ಅರಬಿಯಾ ಬಾನು ಎರಡನೇ ಮಗುವಿನ ಹೆರಿಗೆಗೆಂದು ತನ್ನ ತಾಯಿಯ ಮನೆಯಾದ ಬೆಟ್ಟದಪುರಕ್ಕೆ ಬಂದಿದ್ದಳು. ಕಳೆದ 9 ದಿನಗಳ ಹಿಂದೆ ಮಗುವಿಗೆ ಜನ್ಮ ನೀಡಿದ್ದಳು.

ಶನಿವಾರ ಬೆಳಿಗ್ಗೆ ಫೋನಿನಲ್ಲಿ ಮಾತನಾಡುತ್ತಾ ಸಿಟ್ಟಿನಿಂದ ಒಳಗಡೆ ಹೋಗಿ ಒಂಬತ್ತು ದಿನಗಳ ಹಸುಗೂಸನ್ನು ಮತ್ತು ಮೂರು ವರ್ಷಗಳ ಮಗುವಿನ ಕತ್ತನ್ನು ಕುಯ್ದು ತಾನು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಘಟನೆ ತಿಳಿದ ನಂತರ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಘಟನೆ ವಿವರಗಳನ್ನು ಪಡೆದುಕೊಂಡರು: ಹೆಚ್ಚುವರಿ ಸ್ಥಳ ಪರಿಶೀಲನೆ ಮಾಡಿದಾಗ ಬಾಗಿಲನ್ನು ಹಾಕಿಕೊಂಡು ಎಂಟು ದಿನದ ಮಗು ಮತ್ತು ಮೂರು ವರ್ಷದ ಮಗುವನ್ನು ಸಾಯಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ. ಮಲ್ಲಿಕ್ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ತನಿಖೆ ನಡೆಸಿ ವರದಿ ಬಂದ ನಂತರ ಘಟನೆಗೆ ಕಾರಣ ಏನೆಂಬುದನ್ನು ತಿಳಿಸಲಾಗುವುದು ಎಂದು ಹೇಳಿದರು.

ಈ ವೇಳೆ ತಾಲೂಕು ದಂಡಾಧಿಕಾರಿ ನಿಸರ್ಗಪ್ರಿಯ, ಪಿರಿಯಾಪಟ್ಟಣ ವೃತ್ತ ನಿರೀಕ್ಷಕ ದೀಪಕ್, ಬೆಟ್ಟದಪುರ ಠಾಣೆಯ ಆರಕ್ಷಕ ಉಪನಿರೀಕ್ಷಕ ಅಜಯ್ ಕುಮಾರ್, ಆರೋಗ್ಯ ಇಲಾಖೆ ಅಧಿಕಾರಿಗಳು ಸೇರಿದಂತೆ ಇತರ ಅಧಿಕಾರಿಗಳು ಘಟನೆ ವಿವರ ಪಡೆದರು.

ಘಟನೆಯ ವಿವರ ತಿಳಿಯುತ್ತಿದ್ದಂತೆ ಬೆಟ್ಟದಪುರ ಹಾಗೂ ಸುತ್ತಮುತ್ತಲ ಗ್ರಾಮಗಳ ಜನರು ತಂಡೋಪತಂಡವಾಗಿ ಬಂದು ಮನೆಯ ಮುಂದೆ ನೆರೆದಿದ್ದರು.








# ಕನ್ನಡಿಗರು ಸೌಹಾರ್ದ ಮನಸ್ಸಿನವರು

## ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಅಭಿಮತ

**ಪಿರಿಯಾಪಟ್ಟಣ :** ಕನ್ನಡ ನಾಡಿನ ಜನರು ಸೌಹಾರ್ದ ಮನಸ್ಸು ಉಳ್ಳವರು ಇದಕ್ಕಾಗಿಯೆ ಹಲವು ರಾಜ್ಯಗಳಿಂದ ಜನರು ಇಲ್ಲಿ ನೆಲಸಿ ಮುಕ್ತವಾಗಿ ವಾಸಿಸುತ್ತಿದ್ದು ಕರ್ನಾಟಕ ಇಂದು ಸರ್ವಜನಾಂಗದ ಶಾಂತಿಯ ತೋಟವಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ತಿಳಿಸಿದರು.

ಪಿರಿಯಾಪಟ್ಟಣದಲ್ಲಿ ನಡೆದ 70ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮಾತನಾಡಿದರು. ಇಂದು ರಾಜ್ಯೋತ್ಸವ ಆಚರಣೆ ಕೇವಲ ಆಟೋಚಾಲಕರಿಗೆ ಸೀಮಿತವಾಗಿದೆ. ಇದು ಬದಲಾಗಬೇಕು ಪ್ರತಿಯೊಬ್ಬ ಕನ್ನಡಿಗರು ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸುವಂತಾಗಬೇಕು. ಕನ್ನಡ ಭಾಷೆ ಶ್ರೀಮಂತ ಭಾಷೆ ಸಾವಿರಾರು ವರ್ಷಗಳ ಇತಿಹಾಸವಿದೆ ಇದನ್ನು ಉಳಿಸಿ ಬೆಳೆಸುವ ಕೆಲಸವಾಗಬೇಕಿದೆ ಎಲ್ಲಾದರೂ ಇರು ಎಂ-ತಾದರು ಇರುವ ಸದಾ ಕನ್ನಡಿಗನಾಗಿರು ಎಂದು ತಿಳಿಸಿದರು.

ಬಣ್ಣ ಅರಗು ಮಂಡಳಿ ಅಧ್ಯಕ್ಷ ಎಚ್.ಡಿ.ಗಣೇಶ್ ಮಾತನಾಡಿ ನಮ್ಮ ಸಂಸ್ಕೃತಿ ಸಂಪ್ರದಾಯವನ್ನು ಉಳಿಸಿ ಬೆಳೆಸುವ ಕೆಲಸವಾಗಿದೆ. ಕನ್ನಡ ಉಳಿಸುವಿಕೆ ಕೇವಲ ನವಂಬರ್‌ಗೆ ಸೀಮಿತವಾಗಬಾರದು ಬದಲಾಗಿ ವರ್ಷದ 350 ದಿನವೂ ನಾಡು ನುಡಿಯ ಅಭಿವೃದ್ದಿಗೆ ಪೂರಕವಾಗಿರುವಂತೆ ಮಾಡಬೇಕು ಎಂದು ತಿಳಿಸಿದರು.

ವಿಶೇಷ ಭಾಷಣಕಾರರಾಗಿ ಆಗಮಿಸಿದ ಕಿತ್ತೂರು ಸರ್ಕಾರಿ ಪದವಿ ಪೂರ್ವಕಾಲೇಜು ಉಪನ್ಯಾಸಕ ಜಯರಾಮ್ ಮಾತನಾಡಿ ಜಾಗತಿಕ ಸಂಸ್ಕೃತಿಯ ಒತ್ತಡದಲ್ಲಿ ಕನ್ನಡ ಕನ್ನಡದ ನೆಲದಲ್ಲಿಯೆ ಮಂಕಾಗುತ್ತಿದ್ದು ತಬ್ಬಲಿಯಾಗಿದೆ. ಕನ್ನಡ ಎಂದಿಗೂ ಸಾಯುವುದಿಲ್ಲ ಆದರೂ ಇಂದು ಸಾಮಾಜಿಕ ಜಾಲತಾಣಗಳಲ್ಲಿ ಇಂಗ್ಲೀಷ್ ಮೂಲಕ ಕನ್ನಡ ಬಳಕೆ ಮಾಡುವಂತಾಗಿರುವುದು ದುಃಖದ ಸಂಗತಿ ಎಂದರು. ಕನ್ನಡದ ಬೇರುಗಳು ಒಣಗುತ್ತಿವೆ ಕನ್ನಡದ ಸ್ವರೂಪವೇ ಬದಲಾಗುತ್ತಿದೆ ಆದ್ದ-ರಿಂದ ಕನ್ನಡ ಉದ್ದಾರವಾಗಬೇಕಾಗದರೆ. ಸರ್ಕಾರಿಶಾಲೆಗಳು ಬಲವರ್ಧನೆಯಾದಾಗ ಮಾತ್ರ ಸಾಧ್ಯ ಆದರೆ ಇಂದು ಸರ್ಕಾರಿ ಶಾಲೆಗಳು ಮುಚ್ಚುವ ಸ್ಥಿತಿ ತಲುಪುತ್ತಿವೆ. ಆಂಗ್ಲದ ಮೇಲಿನ ವ್ಯಾಮೋಹದಿಂದ ನಮ್ಮತನವನ್ನು ನಾವು ಮರೆಯುತ್ತಿದ್ದೇವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ನಿಸರ್ಗಪ್ರಿಯಾ ಧ್ವಜಾರೋಹಣ ನೆರವೇರಿಸಿ ಧ್ವಜಸಂದೇಶ ನೀಡಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ವಿವಿಧ ಕನ್ನಡ ಹಾಡುಗಳಿಗೆ ನೃತ್ಯಮಾಡಿ ಸಾಂಸ್ಕೃತಿ ಕಾರ್ಯಕ್ರಮ ನೀಡಿದರು. ಕಾರ್ಯಕ್ರಮದಲ್ಲಿ ಶಿಕ್ಷಕಿ ಪಿ.ಶೋಭಾಚೆಲುವಯ್ಯ ಅವರ ಮೂರನೆ ಕವನ ಸಂಕಲನ ಹೊನಲು ಎಂಬ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು. ಪುಷ್ಪ ವಿದ್ಯಾಸಂಸ್ಥೆಯ ಶಿಕ್ಷಕಿಯರು ನೃತ್ಯ ಮಾಡುವ ಮೂಲಕ ನೋಡುಗರ ಗಮನ ಸೆಳೆದರು. ಕಾರ್ಯಕ್ರಮದಲ್ಲಿ ಕನ್ನಡದಲ್ಲಿ 125 ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷೆ ರೂಹಿಲಾಖಾನಂ, ಪುರಸಭೆ ಸ್ಥಾಯಿಸಮಿತಿ ಅಧ್ಯಕ್ಷ ಅಬ್ದುಲ್‌ಅರ್ಷದ್, ಸದಸ್ಯ ರವಿ, ಇಒ ಡಿ.ಬಿ.ಸುನಿಲ್‌ಕುಮಾರ್, ಬಿಇಒ ಡಿ.ಎನ್. ರವಿಪ್ರಸನ್ನ, ಪುರಸಭೆ ಮುಖ್ಯಾಧಿಕಾರಿ ಎಚ್.ಪಿ.ಮಧು, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೃಷ್ಣೇಗೌಡ, ಶಿರಸ್ತೆಧರ್ ಶಕೀಲಾ, ಕನ್ನಡ ಸಾಹಿತ್ಯ ಪರಿಷತ್ತ ಅಧ್ಯಕ್ಷ ನವೀನ್‌ಕುಮಾರ್, ಅಕ್ಷರ ದಾಸೋಹ ನಿರ್ದೇಶಕ ಪ್ರಶಾಂತ್, ಎಡಿಎಲ್‌ಆರ್ ಮುನಿಯಪ್ಪ, ಡಾ.ಸೋಮಯ್ಯ, ಆರ್‌ಐ ಪಾಂಡುರಂಗ, ನವೀನ್, ಸೇರಿದಂತೆ ಮತ್ತಿತರರು ಹಾಜರಿದ್ದರು.



ಪಿರಿಯಾಪಟ್ಟಣದಲ್ಲಿ ನಡೆದ 70ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು ಪಾಲ್ಗೊಂಡಿದ್ದರು.




ವಿಜಯ ಕಾಲ

# ಅಣ್ಣಾವ್ರ ಕನ್ನಡಾಭಿಮಾನ
# ಮೂರು ತಲೆಮಾರಿನ ಸಿನಿ ಪಯಣ

■ ಮಾ. ವೆಂಕಟೇಶ
ಲೇಖಕರು

**ಮೂ**ಕಿ ಚಿತ್ರಗಳ ಯುಗ ಅಂತ್ಯಗೊಂಡು, ಟಾಕಿ ಚಿತ್ರಗಳ ಯುಗ ಆರಂಭವಾಗಿದ್ದ ಕಾಲಘಟ್ಟದಲ್ಲಿ, ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದವರೇ ವೃತ್ತಿ ರಂಗಭೂಮಿಯ ನಟ ಸಿಂಗನಲ್ಲೂರು ಪುಟ್ಟಸ್ವಾಮಿ ಮುತ್ತುರಾಜ್.

ಪುಟ್ಟಸ್ವಾಮಿರವರು ಸಹ ವೃತ್ತಿರಂಗ ಭೂಮಿಯ ಮಹಾನ್ ಕಲಾವಿದರು. ತಂದೆಯ ಸ್ಫೂರ್ತಿ ಹಾಗೂ ಹಿರಿಯರ ಮಾರ್ಗದರ್ಶನದಿಂದ ಮುತ್ತುರಾಜ್ ಸಹ ನಾಟಕಗಳಲ್ಲಿ ಅಭಿನಯಿಸುತ್ತಿದ್ದರು. ಪ್ರಸಿದ್ಧ ಗುಬ್ಬಿವೀರಣ್ಣ ನಾಟಕ ಕಂಪನಿಯಲ್ಲಿ ಕಲಾವಿದರಾಗಿದ್ದ ಮುತ್ತುರಾಜ್‌ಗೆ ಅಭಿನಯಿಸಲು ಅವಕಾಶ ನೀಡಿದವರು ನಾಟಕಕಾರರೂ ಆಗಿದ್ದ ಚಿತ್ರನಿರ್ದೇಶಕ ಹೆಚ್.ಎಲ್. ಎನ್. ಸಿಂಹ.

ಗುಬ್ಬಿ ಕರ್ನಾಟಕ ಫಿಲಮ್ಸ್ ಚಿತ್ರ ನಿರ್ಮಾಣ ಸಂಸ್ಥೆ ಮೂಲಕ 1954ರಲ್ಲಿ ಗುಬ್ಬಿ ವೀರಣ್ಣನವರು ನಿರ್ಮಿಸಿದ 'ಬೇಡರ ಕಣ್ಣಪ್ಪ' ಚಿತ್ರ ನಾಯಕ ನಟ-ರಾಗಿ ರಾಜ್‌ರ ಪ್ರಪ್ರಥಮ ಸಿನಿಮಾ. ಈ ಚಿತ್ರದ ಮೂಲಕ ರಾಜಕುಮಾರ್ ಎಂದು ಮರುನಾಮಕರಣ ಮಾಡಿದವರು ಹೆಚ್.ಎಲ್.ಎನ್. ಸಿಂಹ. ಚಿತ್ರ ಅದ್ಭುತ ಯಶಸ್ಸು ಕಂಡಿತು. ರಾಜಕುಮಾರ್ ಅಭಿನಯವನ್ನು ಜನ ಮೆಚ್ಚಿಕೊಂಡರು. ರಾಷ್ಟ್ರ ಪ್ರಶಸ್ತಿಯೂ ಲಭಿಸಿತು.

ಅಂದಿನಿಂದ ಆರಂಭವಾದ ರಾಜಕುಮಾರರ ಸಿನಿ ಪಯಣವು ನಿರಂತರ ಗೆಲುವಿನ ಹಾದಿಯಲ್ಲಿ ಸಾಗುತ್ತಾ, ಸಾಗುತ್ತಾ ಅಭಿಮಾನಿಗಳ ಆರಾಧ್ಯದೇವರಾದರು, ಕನ್ನಡಿಗರ ಮೆಚ್ಚಿನ ಮೇರು ನಟರಾದರು. 2000ನೇ ಇಸವಿಯಲ್ಲಿ ತೆರೆಕಂಡ ಎಸ್. ನಾರಾಯಣ್ ನಿರ್ದೇಶನದ 'ಶಬ್ಧವೇದಿ' ಚಿತ್ರದವರೆಗೆ 200 ಚಿತ್ರಗಳಲ್ಲಿ ನಾಯಕ ನಟರಾಗಿಯೇ ಅಭಿನಯಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಓದಿದ್ದು ನಾಲ್ಕನೇ ತರಗತಿಯಾದರೂ, ಅವರ ಅಭಿನಯವೆಂಬ ಪದವಿಯು, ಸಂಸ್ಕಾರವೆಂಬ ವ್ಯಕ್ತಿತ್ವವು ಕಲಾಸಾಧನೆಯ ಉತ್ತುಂಗಕ್ಕೇರಲು ಕಾರಣವಾಯಿತು. ಅಪ್ರತಿಮ ಕಲಾವಿದರಾಗಿ ವಿಶ್ವಮಟ್ಟದಲ್ಲಿ ಯುಎಸ್‌ನಿಂದ 'ಕೆಂಟುಕಿ ಕರ್ನಲ್ ಗೌರವ', ಭಾರತ ಸರ್ಕಾರದ 'ಪದ್ಮಭೂಷಣ ಪ್ರಶಸ್ತಿ', ಕರ್ನಾಟಕ ಸರ್ಕಾರದ 'ಕರ್ನಾಟಕರತ್ನ', ಮೈಸೂರು ವಿವಿಯ 'ಗೌರವ ಡಾಕ್ಟರೇಟ್' ಮುಂತಾದ ಬಿರುದು ಸನ್ಮಾನಗಳಿಗೆ ಭಾಜನರಾಗಿದ್ದಾರೆ.

'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಗಾದೆ ಮಾತಿನಂತೆ, ಡಾ.ರಾಜಕುಮಾರ್ ಅವರು ಅಭಿನಯಿಸದ ಪಾತ್ರವಿಲ್ಲ. ಅವರು ಅಭಿನಯಿಸಿರುವ ಒಂದೊಂದು ಸಿನಿಮಾವು ಸಮಾಜದ ಸ್ವಾಸ್ಥ್ಯಕ್ಕೆ ಉತ್ತಮ ಸಂದೇಶಗಳಾಗಿದ್ದವು. ಅದೆಷ್ಟೋ ಜನರು ರಾಜ್ ಚಿತ್ರಗಳನ್ನು ನೋಡಿ ಸ್ಫೂರ್ತಿಗೊಂಡಿದ್ದಾರೆ. ಜೀವನದಲ್ಲಿ ಸಾಧನೆ ಮಾಡಿದ್ದಾರೆ. ಸಮಾಜಕ್ಕೆ ಮಾದರಿಯಾದ ಅಗ್ರಗಣ್ಯ ನಾಯಕ ನಟ ರಾಜಣ್ಣ. ಪ್ರಖ್ಯಾತಿ ಇದ್ದರೂ, ಶ್ರೀಮಂತಿಕೆ ಬಂದರೂ ಅವರು ಎಂದೂ ತಮ್ಮತನ ಬಿಡಲಿಲ್ಲ. ಸದಾ ಶ್ವೇತ ಧಾರಿಯಾಗಿ ನಗುಮೊಗದಲ್ಲಿ ಹಿರಿಯರು ಕಿರಿಯರೆನ್ನದೆ ನಡೆದುಕೊಳ್ಳುತ್ತಿದ್ದ ರೀತಿ ರಿವಾಜು ಇಂದಿನ ಯುವ ನಟರಿಗೆ ಅನುಕರಣೀಯ.

ಕನ್ನಡ ಚಿತ್ರರಂಗದ ಜೊತೆಗೆ, ಕನ್ನಡ ಭಾಷೆಗೂ ಡಾ.ರಾಜಕುಮಾರರ ಕೊಡುಗೆ ಅನನ್ಯ. ರಾಜರ ಕಂಠಸಿರಿಯಲ್ಲಿ ಹೊಮ್ಮುವ ಕನ್ನಡ ಉಚ್ಚಾರಣೆ ತುಂಬಾ ಸೊಗಸಾದುದು. ಅವರ ಸಂಭಾಷಣೆ ಕೇಳಲು ಇಂಪು ಹಾಗೂ ಹಾಡುವುದರಲ್ಲೂ ಅಮೋಘ. ಅದು ಚಿತ್ರಗೀತೆಯಾಗಲೀ, ಭಕ್ತಿಯಾಗಲೀ, ಭಾವಗೀತೆಯಾಗಲೀ ಅವರಿಗೆ ಅವರೇ ಸಾಟಿ. ಅನ್ಯ ಭಾಷೆಯ ಚಿತ್ರಗಳಲ್ಲಿ ಅಭಿನಯಿಸುವ ಅವಕಾಶ ಇತ್ತಾದರೂ, ಕನ್ನಡಚಿತ್ರರಂಗ ಬಿಟ್ಟು ಪರಭಾಷೆಯತ್ತ ಮುಖ ಮಾಡಲಿಲ್ಲ. ಕನ್ನಡ ಎಂದರೆ ಅಷ್ಟೊಂದು ಅಭಿಮಾನ. ಇಂತಹ ಅಭಿಮಾನ ಇಂದಿನ ನಾಯಕ ನಟರಲ್ಲಿ ಕಾಣೆಯಾಗುತ್ತಿದೆ. ಕನ್ನಡ ಭಾಷೆಗೆ ಅಗ್ರಸ್ಥಾನ ದೊರಕಬೇಕೆಂಬ ಗೋಕಾಕ್ ಚಳವಳಿಯ ನೇತೃತ್ವದಲ್ಲಿ ವಹಿಸಿ ಹೋರಾಟ ನಡೆಸಿದ ರಾಜಣ್ಣನ ಕನ್ನಡ ಪ್ರೇಮ ಮರೆಯಲಾಗದು.

**ಪಾರ್ವತಮ್ಮ ರಾಜಕುಮಾರ್**

ರಾಜಕುಮಾರ್ ಜೀವನ ಸಾಧನೆಗೆ ಬೆಂಬಲವಾಗಿ ನಿಂತವರು ಸಹಧರ್ಮಿಣಿ ಪಾರ್ವತಮ್ಮ. ಉತ್ತಮ ಮಡದಿಯಾಗಿ ಮಾತ್ರವಲ್ಲ, ಅತ್ಯುತ್ತಮ ಚಿತ್ರಗಳ ನಿರ್ಮಾಪಕಿಯಾಗಿಯೂ ಅವರ ಕೊಡುಗೆ ಅಪಾರ. ಸಹೋದರರಾದ ಎಸ್.ಎ.ಚಿನ್ನೇಗೌಡ.ಎಸ್.ಎ.ಶ್ರೀನಿವಾಸ್, ಎಸ್.ಎ. ಗೋವಿಂದರಾಜ್ ಅವರುಗಳ ಸಿನಿಮಾ ವೃತ್ತಿಗೂ ಸಹಕಾರಿಯಾದರು. ಇಂದಿನ ಹೆಸರಾಂತ ನಟಿಯರಾದ ಮಾಲಾಶ್ರೀ, ರಮ್ಯ, ರಕ್ಷಿತಾ, ಸುಧಾರಾಣಿ, ಆಶಾರಾಣಿ ಮುಂತಾದವರು ನಾಯಕಿಯರಾಗಿ ಚಿತ್ರರಂಗ ಪ್ರವೇಶಿಸಲು ಅವಕಾಶ ಕಲ್ಪಿಸಿದ್ದು ಇವರ ಹೆಗ್ಗಳಿಕೆ. ಪ್ರಸ್ತುತ ಅಶ್ವಿನಿ ಪುನಿತ್‌ರಾಜ್‌ಕುಮಾರ್ ಪಿ.ಆರ್.ಕೆ ಚಿತ್ರಸಂಸ್ಥೆಯಡಿ ಸಿನಿಮಾ ನಿರ್ಮಿಸುತ್ತಿದ್ದಾರೆ. ಹಾಗೂ ಗೀತಾ ಶಿವರಾಜ್ ಕುಮಾರ್ ಅವರು ಸಹ ಚಲನಚಿತ್ರ ನಿರ್ಮಾಣ ಸಂಸ್ಥೆ ಪ್ರಾರಂಭಿಸುತ್ತಿದ್ದಾರೆ.



'ಆಡುಮುಟ್ಟದ ಸೊಪ್ಪಿಲ್ಲ' ಎಂಬ ಗಾದೆ ಮಾತಿನಂತೆ, ಡಾ.ರಾಜ ಕುಮಾರ್‌ಅವರು ಅಭಿನಯಿಸದ ಪಾತ್ರವಿಲ್ಲ. ಅವರು ಅಭಿನಯಿಸಿ ರುವ ಒಂದೊಂದು ಸಿನಿಮಾವು ಸಮಾಜದ ಸ್ವಾಸ್ಥ್ಯಕ್ಕೆ ಉತ್ತಮ ಸಂದೇಶಗಳಾಗಿದ್ದವು. ಅದೆಷ್ಟೋ ಜನರು ರಾಜ್ ಚಿತ್ರಗಳನ್ನು ನೋಡಿ ಸ್ಫೂರ್ತಿಗೊಂಡಿದ್ದಾರೆ. ಜೀವನದಲ್ಲಿ ಸಾಧನೆ ಮಾಡಿದ್ದಾರೆ. ಸಮಾಜಕ್ಕೆ ಮಾದರಿಯಾದ ಅಗ್ರಗಣ್ಯ ನಾಯಕ ನಟ ರಾಜಣ್ಣ. ಪ್ರಖ್ಯಾತಿ ಇದ್ದರೂ, ಶ್ರೀಮಂತಿಕೆ ಬಂದರೂಅವರುಎಂದೂ ತಮ್ಮತನ ಬಿಡಲಿಲ್ಲ. ಸದಾ ಶ್ವೇತ ವಸ್ತ್ರಧಾರಿಯಾಗಿ ನಗುಮೊಗದಲ್ಲಿ ಹಿರಿಯರು ಕಿರಿಯರು ಎನ್ನದೆ ನಡೆದು ಕೊಳ್ಳುತ್ತಿದ್ದ ರೀತಿ ರಿವಾಜು ಇಂದಿನ ಯುವ ನಟರಿಗೆ ಯಾವಾಗಲೂ ಅನುಕರಣೀಯ.

1992 ರಲ್ಲಿ ಅಂದಿನ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಸರ್ಕಾರ ಕರ್ನಾಟಕದ ಅತ್ಯುನ್ನತ ನಾಗರೀಕ ಗೌರವವಾಗಿ ಕರ್ನಾಟಕ ರತ್ನ ಪ್ರಶಸ್ತಿ ಸ್ಥಾಪಿಸಿ ಮೊದಲಿಗೆ ರಾಷ್ಟ್ರಕವಿ ಕುವೆಂಪು ಮತ್ತು ವರನಟ ರಾಜ್ ಕುಮಾರ್ ಅವರಿಗೆ ಘೋಷಿಸಿತ್ತು. ಇದರ ಅಂಗವಾಗಿ ಬೆಂಗಳೂರಿನಲ್ಲಿ ಇಬ್ಬರೂ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಅನಾರೋಗ್ಯದ ಕಾರಣದಿಂದ ಕುವೆಂಪು ಅವರು ಸಮಾರಂಭದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿರಲಿಲ್ಲ. ನಿಗದಿಯಂತೆ ಕಾರ್ಯಕ್ರಮ ನಡೆದು ಸಿಎಂ ಬಂಗಾರಪ್ಪ ಅವರು ಪ್ರಶಸ್ತಿ ಪ್ರದಾನ ಮಾಡಲು ಬಂದಿದ್ದರು. ಈ ವೇಳೆ ರಾಜ ಕುಮಾರ್ ತಮ್ಮ ದೊಡ್ಡತನ ಮೆರೆದಿದ್ದರು. ವೇದಿಕೆಯ ಮೇಲೆ ನಿಂತು ಅವರು ಆಡಿದ ಮಾತು ಇಂದಿಗೂ ಒಬ್ಬ ಕಲಾವಿದನಿಗೆ ಇರಬೇಕಾದ ಘನತೆ, ಸಾಮಾಜಿಕ ಪ್ರಜ್ಞೆ, ವ್ಯಕ್ತಿ ಗೌರವನ್ನು ಎತ್ತಿ ಹಿಡಿಯುತ್ತದೆ.

ಕುವೆಂಪು ಹಿರಿಯರಿದ್ದಾರೆ. ಅವರು ದೊಡ್ಡ ಸಾಧಕರು. ನಮ್ಮಿಬ್ಬರಿಗೂ ಈ ಗೌರವ ದೊರಕಿದೆ. ಆದರೆ ಮೊದಲು ಅವರಿಗೆ ಈ ಗೌರವ ಸಮರ್ಪಣೆ ಆಗಲಿ. ಅದಾದ ಮೇಲೆ ನಾನು ವಿನಯದಿಂದ ಈ ಗೌರವ ಸ್ವೀಕಾರ ಮಾಡುತ್ತೇನೆ ಎಂದು ಹೇಳಿದ್ದರು. ರಾಜಕುಮಾರ್ ಅವರ ಈ ನಡೆಗೆ ಇಡೀ ರಾಜ್ಯ, ಪ್ರಜ್ಞಾವಂತ ವಲಯವೇ ಮೆಚ್ಚುಗೆ ವ್ಯಕ್ತಪಡಿಸಿತ್ತು. ಅದರಂತೆ ಖುದ್ದು ಮುಖ್ಯಮಂತ್ರಿಗಳೇ ಮೈಸೂರಿಗೆ ಬಂದು ಕುವೆಂಪು ಅವರ ನಿವಾಸ ಉದಯರವಿಯಲ್ಲಿ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡಿದ್ದರು. ಈ ವೇಳೆ ರಾಜಕುಮಾರ್, ಪಾರ್ವತಮ್ಮ ರಾಜಕುಮಾರ್, ಸಾಹಿತಿ ಚದುರಂಗ ಅವರು ಜೊತೆಗಿದ್ದರು.



ಪ್ರಸ್ತುತ ಅಶ್ವಿನಿ ಪುನಿತ್ ರಾಜ್‌ಕುಮಾರ್ ಪಿ.ಆರ್.ಕೆ ಚಿತ್ರಸಂಸ್ಥೆಯಡಿ ಸಿನಿಮಾ ನಿರ್ಮಿಸುತ್ತಿದ್ದಾರೆ, ಗೀತಾ ಶಿವರಾಜ್ ಕುಮಾರ್ ಚಲನ ಚಿತ್ರ ನಿರ್ಮಾಣ ಸಂಸ್ಥೆ ಪ್ರಾರಂಭಿಸುತ್ತಿದ್ದಾರೆ.

ಆನಂದ್ ಚಿತ್ರದ ಮೂಲಕ ಶಿವರಾಜ್‌ಕುಮಾರ್, ನಂಜುಂಡಿ ಕಲ್ಯಾಣ ಚಿತ್ರದ ಮೂಲಕ ರಾಘವೇಂದ್ರ ರಾಜ್‌ಕುಮಾರ್, 'ಅಪ್ಪು' ಚಿತ್ರದ ಮೂಲಕ ಪುನೀತ್ ರಾಜ್‌ಕುಮಾರ್‌ಅವರನ್ನು ನಾಯಕರಾಗಿ ಬೆಳ್ಳಿತೆರೆಗೆ ತಂದವರು ಅಮ್ಮ ಪಾರ್ವತಮ್ಮ. ಆದರೆ ಬೆಳ್ಳಿತೆರೆ ಪುನೀತ್‌ಗೆ ಹೊಸದಾಗಿರಲಿಲ್ಲ. ನಾಯಕನಾಗುವುದಕ್ಕೆ ಮುಂಚೆ ಬಾಲನಟನಾಗಿ ಹಲವು ಚಿತ್ರಗಳಲ್ಲಿ ಅಭಿನಯಿಸಿದ್ದರು. ಬೆಟ್ಟದ ಹೂವು ರಾಷ್ಟ್ರಪ್ರಶಸ್ತಿಯನ್ನೂ ತಂದುಕೊಟ್ಟಿತು.

ರಾಘವೇಂದ್ರ ರಾಜಕುಮಾರ್ ಪುತ್ರ ವಿನಯ್ ರಾಜಕುಮಾರ್ 'ಸಿದ್ದಾರ್ಥ' ಚಿತ್ರದ ಮೂಲಕ, ಮತ್ತೊಬ್ಬ ಪುತ್ರ ಯುವರಾಜ ಕುಮಾರ್ 'ಯುವ' ಚಿತ್ರದ ಮೂಲಕ ಕನ್ನಡ ಚಿತ್ರರಂಗದಲ್ಲಿ ತೊಡಗಿಸಿಕೊಂಡಿದ್ದಾರೆ.

ರಾಜಕುಮಾರ್ ಹಿರಿಯ ಪುತ್ರಿ ಲಕ್ಷ್ಮೀಗೋವಿಂದರಾಜ್, ಪುತ್ರ ಷಣ್ಮುಖ ಗೋವಿಂದರಾಜ್ 'ನಿಂಬಿಯ ಬನದ ಮ್ಯಾಗ' ಚಿತ್ರದ ಮೂಲಕ ಬೆಳ್ಳಿತೆರೆಗೆ ಪರಿಚಿತರಾಗಲು ಮುಂದಾಗಿದ್ದಾರೆ.

**ಆಟವೋ ವಿಧಿಯಾಟವೋ...**

ಪ್ರಖ್ಯಾತ ನಾಯಕರಾದ ಡಾ.ರಾಜಕುಮಾರ್ ಅವರಿಗೆ ಖಳನಾಯಕನಾಗಿ ಬಂದವನು ಕುಖ್ಯಾತ ಕಾಡುಗಳ್ಳ ವೀರಪ್ಪನ್. ಗಾಜನೂರಿನ ನೂತನ ಮನೆಯಲ್ಲಿ ವಾಸ್ತವ್ಯ ಹೂಡಿದ್ದ ರಾಜ್ ಅವರನ್ನು ಜುಲೈ 30, 2000 ರಂದು ಅಪಹರಿಸಿದನು. ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಅವಿರತ ಪ್ರಯತ್ನ ಹಾಗೂ ನಾಡಿನ ರಾಜ್ ಅಭಿಮಾನಿಗಳ ಬೇಡಿಕೆ ಹಾಗೂ ಹೋರಾಟದ ಫಲವಾಗಿ 15 ನವೆಂಬರ್ 2020 ರಂದು ವೀರಪ್ಪನ್ ಬಂಧನದಿಂದ ರಾಜಕುಮಾರ್ ಬಿಡುಗಡೆಯಾದರು. 108 ದಿನಗಳ ವನವಾಸದಿಂದ ಬಳಲಿದ್ದ ರಾಜಕುಮಾರ್ ಚಿತ್ರರಂಗದಿಂದ ದೂರ ಉಳಿದರು. 12 ಏಪ್ರಿಲ್ 2006 ರಂದು ಕನ್ನಡ ಚಿತ್ರರಂಗದ ಧ್ರುವತಾರೆ ರಾಜಕುಮಾರ ಅಸ್ತಂಗತರಾದರು.

ಪುನೀತ್ ರಾಜಕುಮಾರ್ 29 ಅಕ್ಟೋಬರ್ 2021 ರಂದು ಹೃದಯಾಘಾತದಿಂದ ನಿಧನರಾದರು. ತಂದೆಗೆ ಸೇರಿದ್ದ ಅಭಿಮಾನಿಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪುನೀತ್ ಸಂಸ್ಕಾರದ ವೇಳೆ ಜನ ನೆರೆದಿದ್ದರು. ಇಂದಿಗೂ ನಾಡಿನಾದ್ಯಂತ ಪವರ್ ಸ್ಟಾರ್ ಗುಣಗಾನ ನಡೆದಿದೆ. ಸರ್ಕಾರ ಕೂಡ ಪುನೀತ್ ಸಾಮಾಜಿಕ ಸ್ಮರಿಸಿ ಮರಣೋತ್ತರವಾಗಿ 'ಕರ್ನಾಟಕರತ್ನ' ಪ್ರಶಸ್ತಿ ಘೋಷಿಸಿ ಗೌರವ ಅರ್ಪಿಸಿದೆ.

ಈ ಮಧ್ಯೆ ರಾಜಕುಮಾರ್ ಎರಡನೇ ಪುತ್ರ ರಾಘವೇಂದ್ರ ಅವರಿಗೆ ಪಾರ್ಶ್ವವಾಯು ತಗುಲಿದ ಕಾರಣ ನಾಯಕ ನಟನ ಪಾತ್ರಗಳಿಗೆ ವಿದಾಯ ಹೇಳಿದ್ದಾರೆ. ಹಿರಿಯ ಪುತ್ರ ಶಿವರಾಜ್‌ಕುಮಾರ್ ಸಹ ಅನಾರೋಗ್ಯಕ್ಕೆ ತುತ್ತಾಗಿ ಇತ್ತೀಚೆಗಷ್ಟೆ ವಿದೇಶದಲ್ಲಿ ಯಶಸ್ವಿ ಶಸ್ತ್ರಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದಾರೆ. ಮತ್ತೆ ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದಾರೆ. ಗುಣವಂತ, ಭಕ್ತಿವಂತ ರಾಜಕುಮಾರ್ ಅವರಿಗೆ ನಾಡಿನ ಅಪಾರ ಅಭಿಮಾನಿಗಳ ಶ್ರೀರಕ್ಷೆ ಇದ್ದರೂ, ರಾಜ್ ಕುಟುಂಬದಲ್ಲಿನ ಇಂತಹ ಸಂಕಷ್ಟಗಳು ಯಾಕೆ ಬಂದವು ಎಂಬುವ ಪ್ರಶ್ನೆಗಳಿವೆ. ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿರುವ ರಾಜಕುಮಾರ್ ಕುಟುಂಬ ಕನ್ನಡಿಗರ ಏಳಿಗೆ ಬಯಸಿ, ಅಭಿಮಾನಿ ದೇವರುಗಳ ಕೃತಜ್ಞತೆಗಾಗಿ ಹಾಗೂ ಬಡವರ ಒಳಿತಿಗಾಗಿ ಆಸ್ಪತ್ರೆಯೋ, ಶಾಲೆಯೋ, ಅನಾಥಾಲಯವೋ ಸ್ಥಾಪಿಸಬೇಕಿತ್ತು ಎಂಬುವ ಚರ್ಚೆಗಳು ಸಾರ್ವಜನಿಕವಾಗಿ ಕೇಳಿಬಂದಿದೆ. ಇದಕ್ಕೆ ಕುಟುಂಬದವರೇ ಉತ್ತರಿಸಬೇಕು. ಇಂತಹ ಸತ್ಕಾರ್ಯ ಮಾಡಲು ಇನ್ನೂ ಕಾಲ ಮಿಂಚಿಲ್ಲ.







# ಬಂಕಹಳ್ಳಿ ಗ್ರಾಮದ ಜನರಿಗೆ ಮೂಲಸೌಲಭ್ಯವೆಂಬುದು ಮರೀಚಿಕೆ!

■ ಹುಲ್ಲಹಳ್ಳಿ ಮೋಹನ್

## ಸಾರಿಗೆ ವ್ಯವಸ್ಥೆ ಇಲ್ಲದೆ ನಿತ್ಯ ಪರದಾಟ ■ ಕಾಡು ಪ್ರಾಣಿಗಳ ಕಾಟ

**ನಂಜನಗೂಡು :** ಕೂಲಿ ಕೆಲಸಕ್ಕೆ ಹೊರಗೆ ತೆರಳಿದವರು ಮತ್ತೆ ಮನೆಗೆ ಮರಳುತ್ತೇವೆ ಎಂಬುದು ಈ ಗ್ರಾಮದ ಜನರಿಗೆ ಖಚಿತವಿಲ್ಲ.

ಶಾಲಾ ಕಾಲೇಜುಗಳಿಗೆ ತೆರಳುವ ಹೋಗುವ ವಿದ್ಯಾರ್ಥಿಗಳಿಗೆ ಬಸ್ ಸೌಲಭ್ಯವೂ ಇಲ್ಲ. ಕೃಷಿ ಕಾರ್ಯಗಳಿಗೆಂದು ಜಮೀನುಗಳಿಗೆ ಹೋದರೆ ಹುಲಿ, ಆನೆ, ಚಿರತೆಗಳ ಭಯ!

ಇದು ತಾಲ್ಲೂಕಿನ ಕಾಡಂಚಿನ ಗ್ರಾಮವಾದ ಬಂಕಹಳ್ಳಿಯ ದುಸ್ಥಿತಿ. ಕೃಷಿ ಭೂಮಿಯನ್ನೇ ನಂಬಿ ಬದುಕುವ ರೈತರು, ಕೂಲಿಗಾಗಿ ಬೇರೆ ಊರುಗಳಿಗೆ ತೆರಳುವ ಕಾರ್ಮಿಕರು ದಿನನಿತ್ಯ ಶಾಲೆ, ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು ಸೂಕ್ತ ಸೌಲಭ್ಯಗಳಿಲ್ಲದೆ ಪರದಾಡುವಂತಾಗಿದೆ. ಕಳೆದ ಹತ್ತು ವರ್ಷಗಳ ಹಿಂದೆ ಜಮೀನುಗಳಿಗೆ ತೆರಳಿದರೆ ನರಭಕ್ಷಕ ಹುಲಿಗಳ ಭಯ ಎಂದು ಹೇಳಲಾಗುತ್ತಿತ್ತು. ಆದರ ಇತ್ತೀಚಿನ ದಿನಗಳಲ್ಲಿ ಹುಲಿ, ಚಿರತೆ, ಆನೆಯಂತಹ ಕಾಡುಪ್ರಾಣಿಗಳ ಸಂತತಿ ಹೆಚ್ಚಾಗಿರುವ ದೆಸೆಯಿಂದ ಸಂಜೆ ಆರು ಗಂಟೆ ಆಗುವುದೇ ತಡ ಗ್ರಾಮದ





ಸುತ್ತಮುತ್ತ ಅಡ್ಡಾಡುವುದೇ ದುಸ್ತರವಾಗಿದೆ. ಯಾವ ಕ್ಷಣದಲ್ಲಿ ಕಾಡುಪ್ರಾಣಿಗಳು ದಾಳಿ ಮಾಡುವವೋ ಎಂದು ಜೀವವನ್ನು ಕೈಯಲ್ಲಿ ಹಿಡಿದು ಬದುಕಬೇಕಾದ ಸ್ಥಿತಿ ಗ್ರಾಮಸ್ಥರದ್ದು.

ಬಂಕಹಳ್ಳಿ ಬಂಡಿಪುರ ರಾಷ್ಟ್ರೀಯ ಉದ್ಯಾನವನದ ಗಡಿ ಭಾಗದಲ್ಲಿದ್ದು, ಒಂದೂವರೆ ಸಾವಿರಕ್ಕೂ ಹೆಚ್ಚು ಗ್ರಾಮಸ್ಥರು ವಾಸಿಸುತ್ತಿದ್ದಾರೆ. ಬಹುತೇಕರು ಕೃಷಿ ಭೂಮಿಯನ್ನೇ ನೆಚ್ಚಿಕೊಂಡಿದ್ದು, ಕೂಲಿ ಕಾರ್ಮಿಕರೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಬಂಕಹಳ್ಳಿಯ ಗ್ರಾಮದಿಂದ ಬೇರೆ ಊರಿನತ್ತ ತೆರಳಬೇಕಾದರೆ 3 ಕಿ.ಮೀ. ನಡೆದು ಸಾಗಬೇಕು. ರಾಜ್ಯ ಹೆದ್ದಾರಿಯಿಂದ ಈ ಗ್ರಾಮಕ್ಕೆ ತೆರಳಬೇಕು ಎಂದರೆ ಯಾವುದೇ ಸಾರಿಗೆ ಸೌಲಭ್ಯವಿಲ್ಲ. ಹಲವು ವರ್ಷಗಳಿಂದಲೂ ಸಾರಿಗೆ ಸೌಲಭ್ಯಕ್ಕಾಗಿ ಗ್ರಾಮಸ್ಥರು ಕಚೇರಿಯಿಂದ ಕಚೇರಿಗೆ ಅಲೆದು ಹೈರಾಣಾಗಿದ್ದಾರೆ. ನಂಜನಗೂಡು ಮೀಸಲು ಕ್ಷೇತ್ರದಲ್ಲಿ ಆಯ್ಕೆಯಾದ ಜನಪ್ರತಿನಿಧಿಗಳಿಗೆ ಮನವಿ ಪತ್ರಗಳನ್ನು ಕೂಡ ಸಲ್ಲಿಸಿದ್ದಾರೆ. ಆದರು ಯಾವುದೇ ಪ್ರಯೋಜನವಾಗಿಲ್ಲ. ಕೂಲಿ ಗಾಗಿ ತೆರಳುವ ಕಾರ್ಮಿಕರು, ಶಾಲಾ ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು ಕೃಷಿ ಭೂಮಿಗಳಿಗೆ ತೆರಳುವ ರೈತರು ಈ ರಸ್ತೆಯಲ್ಲಿ ಜೀವ ಭಯದಲ್ಲೇ ನಡೆದು ಸಾಗಬೇಕಾಗಿದೆ.

**ರಾ**ಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ, ಮೈಸೂರಿನ ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಮ ಪಂಚಾಯಿತಿಗೆ ಸೇರಿರುವ ಬಂಕಹಳ್ಳಿ ಗ್ರಾಮದಲ್ಲಿ ಅತಿ ಹೆಚ್ಚು ಭೂಮಿಯನ್ನೇ ನಂಬಿ ಬದುಕುವ ಜನರು ಮತ್ತು ಕೂಲಿ ಕಾರ್ಮಿಕರೆ ವಾಸಿಸುವ ಜನರಿದ್ದಾರೆ. ಬಸ್ ಸೌಲಭ್ಯಗಳ ವ್ಯವಸ್ಥೆ ಜೊತೆಗೆ ಬಸ್ ನಿಲ್ದಾಣದ ವ್ಯವಸ್ಥೆ ಅತಿ ಮುಖ್ಯವಾಗಿ ಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಕಾಡು ಪ್ರಾಣಿಗಳ ಕಾಟ ಹೆಚ್ಚಾಗಿರುವುದರಿಂದ ಸಂಜೆಯ ವೇಳೆ ಮನೆಯಿಂದ ಹೊರಬರಲಾಗದ ಪರಿಸ್ಥಿತಿ ಎದುರಾಗಿದೆ. ಕೂಡಲೇ ಸಂಬಂಧಪಟ್ಟವರು ಬಸ್ ಸೌಲಭ್ಯ ಮತ್ತು ಬಸ್ ನಿಲ್ದಾಣದ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು.

–ಗೋಪಾಲ್, ಬಂಕಹಳ್ಳಿ ಗ್ರಾಮದ ನಿವಾಸಿ

**ಕುಸಿಯುವ ಸ್ಥಿತಿಯಲ್ಲಿ ಬಸ್ ನಿಲ್ದಾಣ:** ಬಂಕಹಳ್ಳಿ ಗ್ರಾಮದಿಂದ 3 ಕಿ.ಮೀ ದೂರದಲ್ಲಿ ಸುಮಾರು 35 ವರ್ಷಗಳ ಹಿಂದೆ ನಿರ್ಮಾಣವಾಗಿರುವ ಬಸ್ ನಿಲ್ದಾಣದ ಸ್ಥಿತಿ ನೋಡಿದರೆ ಕ್ಷೇತ್ರದಲ್ಲಿ ಆಡಳಿತ ನಡೆಸುವ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಕಾರ್ಯವೈಖರಿಯನ್ನು ಅಣಕಿಸುವಂತಿದೆ.

1993 –94 ನೇ ಸಾಲಿನಲ್ಲಿ ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದ ದಿವಂಗತ ಡಿ.ಟಿ.ಜಯಕುಮಾರ್ ಶಾಸಕರಾಗಿದ್ದ ಅವಧಿಯಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಲಾಗಿತ್ತು. ಈಗ ಈ ಬಸ್ ನಿಲ್ದಾಣ ಕುಸಿಯುವ ಹಂತ ತಲುಪಿದ್ದು, ಇಂದೋ ನಾಳೆಯೋ ಕುಸಿಯುವ ಹಂತದಲ್ಲಿದೆ. ಬಸ್ ನಿಲ್ದಾಣದ ಛಾವಣಿ ಅಸ್ಥಿಪಂಜರದಂತಾಗಿ ಅವಾಸನದ ಅಂಚು ತಲುಪಿದೆ. ಮಳೆ ಮತ್ತು ಬೇಸಿಗೆಯ ಕಾಲಕ್ಕೆ ರಕ್ಷಣೆಗಾಗಿ ನಿಲ್ಲಲು ಸಾಧ್ಯವಾಗದ ಸ್ಥಿತಿಯಲ್ಲಿದೆ.

ಹತ್ತು ಹಲವು ಮೂಲಸೌಕರ್ಯಗಳ ಕೊರತೆಯಿಂದ ನರಳುತ್ತಿರುವ ಬಂಕಹಳ್ಳಿಯತ್ತ ಜನಪ್ರತಿನಿಧಿಗಳು ಗಮನ ಹರಿಸಬೇಕಾಗಿದೆ.


ರಾಜು ನಡಪ್ನಳ್ಳಿ
ಉದ್ಯಮಿಗಳು
ಕೃಷ್ಣ
ಮಾಲೀಕರು, ಕೃಷ್ಣ ಟ್ರೇಡರ್ಸ್
ಅಜ್ಗರ್
ಸದಸ್ಯರು
ಮೈಸೂರು ಜಿಲ್ಲಾ ವಕ್ಫ್ ಮಂಡಳಿ
BREATHE EASY IN COORG
PRIME LAYOUTS WITH FRESH AIR AND SCENIC VIEWS!
HARANGI GARDENIA
Plots for sale
PREMIUM PLOTS WITH PREMIUM FACILITES
BOOK NOW !
+91 9686944436
+91 9900144668
GUDDEHOSUR JUNCTION TO HARANGI DAM ROAD, COORG.
ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರೂ,
ದಿಟ್ಟ ನೇರ ನುಡಿಗಳಿಗೆ ಹೆಸರಾದ ಪತ್ರಕರ್ತರಾದ
ಕೆ.ದೀಪಕ್ ಅವರ ಸಾರಥ್ಯದಲ್ಲಿ
ಪ್ರಕಟಗೊಳ್ಳುತ್ತಿರುವ
ವಿಜಯ ಕಾಲ
ದಿನಪತ್ರಿಕೆ ಮತ್ತು ಡಿಜಿಟಲ್ ಮಾಧ್ಯಮ, ಕಚೇರಿ
ಆರಂಭೋತ್ಸವಕ್ಕೆ ಶುಭಕಾಮನೆಗಳು
ಹಾಗೂ ಸಮಸ್ತ ನಾಡಿನ ಜನತೆಗೆ
52ನೇ ಕನ್ನಡ ರಾಜ್ಯೋತ್ಸವದ ಶುಭಾಶಯಗಳು

'ಸುಪ್ರೀಂ ಮುಖ್ಯ ನ್ಯಾಯಾಧೀಶರಿಗೆ ಚಪ್ಪಲಿ ಎಸೆದದ್ದು

# ದೊಡ್ಡ ಸುದ್ದಿಯೇ ಆಗಲಿಲ್ಲ

## ವಿಧಾನ ಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್ ವಿಷಾದ



**ಮೈಸೂರು:** ಇಂದು ಡಿಜಿಟಲ್ ಮಾಧ್ಯಮ ನಡೆಸುವುದು ಸುಲಭ. ಆದರೆ ಪತ್ರಿಕೆ ನಡೆಸುವುದು ಸಾಹಸದ ಕೆಲಸ. ಅದನ್ನು ನಿತ್ಯವೂ ಹಣ ಬೇಕಾಗುತ್ತದೆ. ಇಂತಹ ಸಾಹಸದ ಕೆಲಸವನ್ನು ದೀಪಕ್ ಮಾಡುತ್ತಿದ್ದೇನೆ ಎಂದಾಗ ನನಗೆ ಖುಷಿ ಮತ್ತು ಭಯ ಎರಡೂ ಆಯಿತು. ಪತ್ರಿಕಾ ಸ್ವಾತಂತ್ರ್ಯದ ಹರಣ ಆಗುತ್ತಿರುವ ಇಂತಹ ವಿಷಮ ಕಾಲಘಟ್ಟದಲ್ಲಿ ದೀಪಕ್ ರೀತಿಯ ಪತ್ರಕರ್ತರ ಅಗತ್ಯ ಇದೆ ಎಂದು ವಿಧಾನ ಪರಿಷತ್ ಸದಸ್ಯರಾದ ಡಾ. ಶಿವಕುಮಾರ್ ತಿಳಿಸಿದರು.

ಈ ಹಿಂದೆ ಮುಖ್ಯಮಂತ್ರಿಯೊಬ್ಬರತ್ತ ಚಪ್ಪಲಿ ಎಸೆದಿದ್ದಾಗ ದೇಶಾದ್ಯಂತ ಸುದ್ದಿಯಾಗಿತ್ತು. ಆದರೆ ಈಗ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರತ್ತ ಶೂ ಎಸೆದರೂ ದೊಡ್ಡ ಮಟ್ಟದ ಸುದ್ದಿಯಾಗಲಿಲ್ಲ. ಮೂವತ್ತು ಕೋಟಿ ಜನರು ಕಟ್ಟಿರುವ ಎಲ್ಐಸಿ ಹಣವನ್ನು ಅಂಬಾನಿ ಕಂಪನಿಗೆ ಹಾಕಿ ಒಂದು ದಿನದಲ್ಲಿ ಒಂಭತ್ತು ಸಾವಿರ ಕೋಟಿ ನಷ್ಟ ಮಾಡಿದ್ದಾರೆ. ಇದನ್ನು ನಮ್ಮ ಪತ್ರಿಕೆಗಳು ಬರಯಲಿಲ್ಲ. ವಾಷಿಂಗ್ ಟನ್ ಪೊ?ಸ್ಟ್ ವರದಿ ಮಾಡಿತು. ಇಂದು ನಮ್ಮ ಪತ್ರಿಕೆಗಳು ಬಂಡವಾಳ ಶಾಹಿಗಳ ಹಿಡಿತಕ್ಕೆ ಸಿಲುಕಿ ನಲುಗುತ್ತಿವೆ. ದೀಪಕ್ ಉತ್ತಮ ಪತ್ರಕರ್ತನಾಗಿದ್ದಾರೆ. ಉತ್ತಮ ಪತ್ರಿಕೋದ್ಯಮಿ ಆಗಲಿ ಎಂದು ಶುಭ ಹಾರೈಸಿದರು.

ಹಿರಿಯ ಪತ್ರಕರ್ತರಾದ ಡಿ. ಮಹದೇವಪ್ಪ ಅವರು ಅಭಿನಂದನೆ ಸ್ವೀಕರಿಸಿ ಮಾತನಾಡಿ, ದೀಪಕ್ ಅವರಿಗೆ ಬದುಕು ಮತ್ತು ವೃತ್ತಿಯಲ್ಲಿ ಬದ್ಧತೆ ಇದೆ. ಒಮ್ಮೆ ದಸರಾ ಸಂದರ್ಭದಲ್ಲಿ ಅರಮನೆ ಸುತ್ತಲೂ ಬೀದಿ ಬದಿ ವ್ಯಾಪಾರಿಗಳು ಹೆಚ್ಚಾಗಿದ್ದಾರೆ. ಅವರಿಂದ ಪ್ರವಾಸಿಗರಿಗೆ ತೊಂದರೆ ಆಗುತ್ತಿದೆ ಎನ್ನುವ ಬಗ್ಗೆ ಸ್ಟೋರಿ ಮಾಡಿಸಿದ್ದೆ. ಅದರೆ ಇದನ್ನು ದೀಪಕ್ ಅವರು ವಿರೋಧಿಸಿದ್ದರು. ದಸರಾ ಅವರಿಗೆ ಹಬ್ಬ ಮಾತ್ರವಲ್ಲ, ಬದಲಿಗೆ ಬದುಕು. ಅದೊಂದು ಹಬ್ಬದ ದೆಸೆಯಿಚಿದ ಸಾಕಷ್ಟು ಯೋಜನೆ ಮಾಡಿಕೊಂಡಿರುತ್ತಾರೆ. ಮಕ್ಕಳ ವಿದ್ಯಾಭ್ಯಾಸ, ಮದುವೆ, ಸಾಲ ತೀರುವಳಿ ಹೀಗೆ ನಾನಾ ಯೋಜನೆ ಮಾಡಿಕೊಂಡಿರುತ್ತಾರೆ. ಪ್ರವಾಸಕ್ಕೆ ಬರುವವರಿಗೆ ನೂರು ರೂಪಾಯಿ ಖರ್ಚು ಮಾಡಿದರೆ ಏನೂ ಆಗುವುದಿಲ್ಲ ಎಂದು ಹೇಳಿದ್ದರು. ಇದರಿಂದ ನನಗೂ ಈ ವಾದ ಸರಿ ಎನ್ನಿಸಿತ್ತು. ಇಂತಹ ದೃಷ್ಟಿಕೋನ ಇಟ್ಟುಕೊಂಡಿರುವ ದೀಪಕ್ ಅವರಿಂದ ಉತ್ತಮ ಪತ್ರಿಕೋದ್ಯಮ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

## ಶ್ರೇಷ್ಠ ಪತ್ರಿಕೋದ್ಯಮಕ್ಕೆ ಆದ್ಯತೆ: ಕೆ.ದೀಪಕ್



ನನಗೆ ಓದುವುದು, ಬರೆಯುವುದು, ಭಾಷಣ ಮಾಡುವುದು, ಮಾಧ್ಯಮ ಬಿಟ್ಟರೆ ಬೇರೆ ಏನೂ ಗೊತ್ತಿಲ್ಲ. ಗಾಂದಿಯುಗದ ಪತ್ರಿಕೋದ್ಯಮದಿಂದ ಗಾಂಧಿ ನೋಟಿನೆಡೆಗೆ ಪತ್ರಿಕೋದ್ಯಮ ಸಾಗುತ್ತಿರುವ ಇಂದಿನ ಕಾಲಘಟ್ಟದಲ್ಲಿ ನಾವು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ. ನನ್ನ ಸಂಸ್ಥೆ ಎಷ್ಟು ಸುದೀರ್ಘವಾಗಿ ಇರುತ್ತದೆ ಎನ್ನುವುದಕ್ಕಿಂತ ಎಷ್ಟು ಶ್ರೇಷ್ಠವಾಗಿ ಇರುತ್ತದೆ ಎನ್ನುವ ಕಡೆಗೆ ನಮ್ಮ ಗಮನ ಇರುತ್ತದೆ. ನಾವು ಗಾಂಧಿ, ಅಂಬೇಡ್ಕರ್ ಅವರನ್ನು ಸ್ಮರಿಸದೇ, ಅರಿಯದೇ ಇಂದು ಪತ್ರಿಕೋದ್ಯಮ ಮಾಡಲು ಸಾಧ್ಯವಿಲ್ಲ. ಒ<ದು ಕಾಲದಲ್ಲಿ ಯಾವ ಸಮುದಾಯ ಅಕ್ಷರವನ್ನು ಕಲಿಯಲು ಅನರ್ಹ ಎಂದು ಒಂದು ವರ್ಗ ದೂರ ಇಟ್ಟಿತ್ತೋ ಅಂತಹ ಹಕ್ಕನ್ನು ಕೊಟ್ಟಿದ್ದು ಅಂಬೇಡ್ಕರ್. ಆ ಹಕ್ಕಿನ ಬಲದಿಂದಲೇ ನಾನು ಪ್ರಶ್ನೆ ಮಾಡುವುದನ್ನು ಕಲಿತೆ. ಕನ್ನಡದಲ್ಲಿ 25 ವರ್ಷಗಳ ಸುದೀರ್ಘ ಪತ್ರಿಕಾ ವೃತ್ತಿ ಮಾಡಿದ್ದೇನೆ. ಈ ಎರಡು ಶ್ರೇಷ್ಠತೆಗಳ ಬಲದಿಂದ ಉತ್ತಮ ಪತ್ರಿಕೋದ್ಯಮ ಮಾಡುತ್ತೇನೆ ಎನ್ನುವ ವಿಶ್ವಾಸ ವ್ಯಕ್ತಪಡಿಸಿದರು.

– ಕೆ.ದೀಪಕ್
ಪ್ರಧಾನ ಸಂಪಾದಕ, ವಿಜಯಕಾಲ



## ವಿಜಯ ಕಾಲ ಕಚೇರಿ ಉದ್ಘಾಟಿಸಿದ ಸಂಸದ ಯದುವೀರ್



**ಮೈಸೂರು:** ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಾರಂಭವಾಗಿರುವ ವಿಜಯ ಕಾಲ ದಿನಪತ್ರಿಕೆಯ ನೂತನಕಚೇರಿಯನ್ನುಮೈಸೂರು–ಕೊಡಗುಲೋಕಸಭಾ ಕ್ಷೇತ್ರದಸಂಸದಯದುವೀರಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟನೆ ಮಾಡಿದರು.

ನಗರದ ವಾಣಿ ವಿಲಾಸ ಮೊಹಲ್ಲಾದಲ್ಲಿ ಇರುವ ಕಚೇರಿ ಉದ್ಘಾಟನೆ ಮಾಡಿ ಮಾತನಾಡಿದ ಅವರು, ಮಾಧ್ಯಮ ಪ್ರಜಾಪ್ರಭುತ್ವದ ನಾಲ್ಕನೇ ಅಂಗ. ಸದಾ ಜನರ ದನಿಯಾಗಿ, ಸಮಸ್ಯೆಗಳನ್ನು ತೋರಿಸುವ ಮೂಲಕ ಅವುಗಳಿಗೆ ಪರಿಹಾರ ಒದಗಿಸುವ ಕೆಲಸ ಮಾಡಿಕೊಂಡು ಬರುತ್ತಿವೆ. ನೇರ, ನಿಷ್ಪಕ್ಷಪಾತ ಮಾಧ್ಯಮಗಳು ಇಂದಿಗೆ ಅಗತ್ಯವಾಗಿ ಬೇಕಾಗಿವೆ. ಈ ಸಾಲಿಗೆ ವಿಜಯ ಕಾಲ ದಿನಪತ್ರಿಕೆ ಸೇರ್ಪಡೆಯಾಗಲಿ. ಮೈಸೂರಿನಲ್ಲಿ ಈ ರೀತಿಯಾಗಿ ಹೊಸ ಪತ್ರಿಕೆ ಪ್ರಾರಂಭವಾಗುತ್ತಿರುವುದು ನನಗೆ ಸಂತೋಷ ತಂದಿದೆ. ಇಡೀ ಪತ್ರಿಕಾ ಬಳಗಕ್ಕೆ ನಾನು ಅಭಿನಂದನೆ ತಿಳಿಸುತ್ತೇನೆ ಎಂದು ಶುಭ ಕೋರಿದರು.

ವಿಜಯಕಾಲಕ್ಕೆ ಶುಭಕೋರಿದ ಗಣ್ಯರು:

ನಂತರ ಶಾಸಕರೂ ಜಂಗಲ್ ಲಾಡ್ಜ್ ರೆಸಾರ್ಟ್‌ನ ಅಧ್ಯಕ್ಷರಾದ ಅನಿಲ್ ಚಿಕ್ಕಮಾದು, ಶಾಸಕರುಗಳಾದ ಡಿ. ರವಿಶಂಕರ್, ಟಿ.ಎಸ್.ಶ್ರೀವತ್ಸ, ಮೈಸೂರು ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷರಾದ ಎಸ್.ಸಿ. ಬಸವರಾಜ್, ಜಿಎಸ್ಎಸ್ ಸಮ್ಮೂಹ ಸಂಸ್ಥೆಗಳ ಮುಖ್ಯಸ್ಥರಾದ ಶ್ರೀಹರಿ ದ್ವಾರಕನಾಥ್, ಪ್ರೊ. ನಂಜರಾಜೇ ಅರಸ್, ಡಾ. ಶೈಲೇಶ್ ಚಂದ್ರರಾಜೇ ಅರಸ್, ಉದ್ಯಮಿಗಳಾದ ಎಪಿಎನ್ ನಾಗೇಶ್, ಅಮರನಾಥ ರಾಜೇ ಅರಸ್, ಮುಖಂಡರಾದ ಶ್ರೀನಾಥ್ ಬಾಬು, ಪ್ರೊ. ನಂಜರಾಜೇ ಅರಸ್, ಮುಖಂಡರಾದ ಶ್ರೀನಾಥ್ ಬಾಬು ಮೊದಲಾದವರು ಹಾಜರಿದ್ದರು.



## ವಿಜಯಕಾಲ ಪತ್ರಿಕೆಗೆ ಶುಭಾಶಯ ಕೋರಿದ ಗಣ್ಯರು, ಹಿತೈಷಿಗಳು...



ಕೆ.ಆರ್.ಕ್ಷೇತ್ರದ ಶಾಸಕರಾದ ಟಿ.ಎಸ್.ಶ್ರೀವತ್ಸ ಅವರು ಶುಭಕೋರಿದರು.



ಕೆ.ಆರ್.ನಗರದ ಶಾಸಕರಾದ ಡಿ.ರವಿಶಂಕರ್ ಅವರು ಶುಭಕೋರಿದರು.



ಹೆಚ್.ಡಿ.ಕೋಟೆ ಶಾಸಕರಾದ ಅನೀಲ್ ಚಿಕ್ಕಮಾದು ಅವರು ಶುಭಕೋರಿದರು.



ಸಾಹಿತಿ ಪ್ರೊ.ಪಿ.ವಿ.ನಂಜರಾಜೇಅರಸ್ ಅವರು ಶುಭಕೋರಿದರು.



ಪ್ರತಿನಿಧಿ ಪತ್ರಿಕೆಯ ಮಾಲೀಕರೂ, ಜಿ.ಎಸ್.ಎಸ್.ಸಮೂಹ ಸಂಸ್ಥೆಯ ಮುಖ್ಯರಸ್ಥರಾದ ಶ್ರೀಹರಿ ದ್ವಾರಕನಾಥ್



ಅನ್ವೇಷಣಾ ಟ್ರಸ್ಟ್ ಅಧ್ಯಕ್ಷರಾದ ಅಮರನಾಥರಾಜೇ ಅರಸ್ ಶುಭಕೋರಿದರು.



ಜಿ9 ಪ್ರಾಜೆಕ್ಟ್ಸ್ ಮುಖ್ಯಸ್ಥರಾದ ಕಿರಣ್ ದಂಪತಿ ಶುಭಕೋರಿದರು.



ಮೈಸೂರು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಹೆಚ್.ಸಿ.ಬಸವರಾಜು ಶುಭಕೋರಿದರು.



ಹಿರಿಯ ಪತ್ರಕರ್ತರಾದ ಸೋಮಶೇಖರ ಕೆರೆಗೂಡು, ರವಿ ಕುಮಾರ್



ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ಶುಭಕೋರಿದರು.



ಎಪಿಎನ್ ಪ್ರಾಪರ್ಟಿಸ್ ಮಾಲೀಕರಾದ ನಾಗೇಶ್ ಅವರು ಶುಭಕೋರಿದರು



ಸ್ನೇಹಿತರಾದ ನಾಗಮಂಗಲ ಮಧು ಅವರೊಂದಿಗೆ



ಸಹೋದರಿಯರಾದ ಕಲ್ಪನಾ, ರೂಪಾ ಮತ್ತು ಕುಟುಂಬದ ಸದಸ್ಯರೊಂದಿಗೆ